ಅಪರಂಜಿ


ಸಂಪುಟ ೫
ಸೆಪ್ಟೆಂಬರ್ ೧೯೮೮
ಸಂಚಿಕೆ ೧೨

ತಿಳಿನಗೆಯ ಕಾರಂಜಿ



- ಆನಂದ್
- ಶಿವರಾಮ ಕಾರಂತ
- ಆಮಲಕ
- ಶಿವು
- ಎಚ್. ಡುಂಡಿರಾಜ್
- ಕೆ.ಜಿ. ಸತೀಶ್
- ಗೊರೂರು ರಾಮಸ್ವಾಮಯ್ಯಂಗಾರ್
- ಚಿತ್ರ ರಾಮ ಸಂದ್ರೆಸ್
- ಜಿ. ರಾಮಣ್ಣ ಆಲೆಟ್ಟಿ
- ಕೃ. ನಾರಾಯಣ ರಾವ್
- ಸೇವ ನಮಿರಾಜ ಮಲ್ಲ
- ಬಿ. ಮಾಲಿನಿ ಮಲ್ಯ

ಬಿಡಿಪ್ರತಿ : ಕೇವಲ ಒಂದೂವರೆ ರೂಪಾಯಿ





(ತಿಳಿನಗೆಯ ಕಾರಂಜಿ)

ಸಂಪುಟ ೫ ಸೆಪ್ಟೆಂಬರ್ ೧೯೮೮ ಸಂಚಿಕೆ ೧೨

ಚಂದಾ ವಿವರ :

ಬಿಡಿ ಪ್ರತಿ :
ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.

ಆಜೀವ ಚಂದಾ 150 ರೂ.

ಪೋಷಕರು 500 ರೂ.

ಗೌರವ ಸಲಹೆಗಾರರು :

ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ವಿಳಾಸ :

ಅಪರಂಜಿ ಕಾರ್ಯಾಲಯ
119 [ಹಳೆಯ 36]
6ನೆ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560003

ಸಂಪಾದಕ :

ಶಿವಕುಮಾರ್

ಜೋರಾಗಿ ಅಳುತ್ತಾ ಆರು ವರ್ಷದ ಶೀನು ಅಡಿಗೆ ಮನೆಗೆ ಬಂದ. "ಯಾಕಳ್ತೀಯಾ ಮಗು ಏನಾಯ್ತು ?" ತಾಯಿ ಸಮಾಧಾನ ಮಾಡುತ್ತಾ ಕೇಳಿದಳು.

"ಮತ್ತೇ, ಅಪ್ಪ ಗೋಡೆಗೆ ಮೊಳೆ ಹೊಡೀತಾ ಇದ್ರು, ಹೆಬ್ಬೆಟ್ಟಿನ ಮೇಲೆ ಸುತ್ತಿಗೆ ಬಿತ್ತು" ಶೀನು ಬಿಕ್ಕಿ ಬಿಕ್ಕಿ ಅಳುತ್ತಿದ್ದ.

"ಅದಕ್ಯಾಕೆ ಅಳಬೇಕು. ನಿಜವಾಗಲೂ ನಗಬೇಕು ನೀನು"

"ಹಾಗೇ ಮಾಡಿದ್ನೇಮ್ಮ. ಅದಕ್ಕೇನೇ" !

ಈ ಸಂಚಿಕೆಯಲ್ಲಿ......

ಮುದ್ರಣ :ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ,
ಬೆಂಗಳೂರು-3. ದೂರವಾಣಿ 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೫ ಸೆಪ್ಟೆಂಬರ್ ೧೯೮೮ ಸಂಚಿಕೆ ೧೨

ಯಾರು ವಿಜ್ಞಾನದಲ್ಲಿದ್ದುಕೊಂಡು ಅದಕ್ಕಿಂತಲೂ ಒಳಗಿರುವನೋ, ವಿಜ್ಞಾನವು ಯಾರನ್ನರಿಯದೋ, ಯಾರು ವಿಜ್ಞಾನವನ್ನು ಆಳು ತ್ತಿರುವನೋ, ಅವನೇ ನಿನ್ನ ಅಂತರ್ಯಾಮಿ, ಆತ್ಮ.

—ಬೃಹದಾರಣ್ಯಕ.

ಪರಮಾತ್ಮನು ವಿಜ್ಞಾನದ (ಎಂದರೆ ಜೀವಾತ್ಮನ) ಅಂತರ್ಯಾಮಿ. ಅವನು ಜೀವರ ಒಡೆಯ ಎಂಬುದು ಈ ವಾಕ್ಯದ ಸ್ಥೂಲಾರ್ಥ.

ಇದು ಒಂದು ರೀತಿ ಇಂದಿನ ವಿಜ್ಞಾನಕ್ಕೂ ಅನ್ವಯಿಸುತ್ತದೆ. ವಿಜ್ಞಾನವು ಪರಮಾಣುವಿನಲ್ಲಿ ಏನಿದೆಯೆಂದು ಹುಡುಕಲು ಹೋಗಿ ಜೀವಲೋಕವನ್ನು ನಾಶಮಾಡಬಲ್ಲ ಬಾಂಬನ್ನು ಹುಡುಕಿದೆ. ಜೀವನ ರಹಸ್ಯವನ್ನು ಭೇದಿಸುತ್ತೇನೆ, ಮಾನವರಿಗೆ ಸುಖ ಕೊಡುತ್ತೇನೆ ಎಂದು ಹೇಳಿಕೊಳ್ಳುತ್ತಾ, ಜೀವನಾವಶ್ಯಕವಾದ ವಾಯುಮಂಡಲ, ನೀರು, ಆಹಾರಗಳನ್ನು ವಿಷಮಯವಾಗಿಸುತ್ತಿದೆ. ಜ್ಞಾನವೊಂದು ಶಕ್ತಿ ಎಂದುಕೊಳ್ಳುತ್ತಾ ಕ್ರೂರಿಗಳಾದ ರಾಜಕೀಯ, ವಾಣಿಜ್ಯ, ಉದ್ಯಮಪತಿಗಳ ಕೈಗೊಂಬೆಯಾಗಿದೆ. ವಿಜ್ಞಾನಕ್ಕೆ ಬೆಳಕು ದೊರೆಯುವುದೆಂದು ?

ಶ್ರೀಕೃಷ್ಣನನ್ನು ಜಾರ, ಚೋರ ಎಂದೆನ್ನುತ್ತಾರೆ. ಅವನು ಏನು ಹೇಳಿದ್ದಾನೆ ಗೊತ್ತಿಲ್ಲ ?

"ಈಶ್ವರನು ಎಲ್ಲಾ ಪ್ರಾಣಿಗಳನ್ನೂ ಯಂತ್ರದ ಮೇಲಿನ ಬೊಂಬೆಗಳಂತೆ ಮಾಯೆಯಿಂದ ತಿರುಗಿಸುತ್ತಾ, ಅವುಗಳ ಹೃದಯದಲ್ಲಿದ್ದಾನೆ !" ಈಶ್ವರನೆಂದರೆ ಅವನೇ !

ಅಪರಂಜಿ ಕಿಡಿ

—ಆನಂದ್

ದಕ್ಷಿಣ ಭಾರತದ ಊರೊಂದರ ಹೆಸರನ್ನು ಶ್ರೀಹರಿ ಖೋಟ ಅಂತ ಬದಲಾಯಿಸುತ್ತಾರಂತೆ !

*　　*　　*　　*

ಬಾಳೆ ಹಣ್ಣಿನಿಂದ ಹರ್ಷ

—ವೈಜ್ಞಾನಿಕ ವರದಿ !

ಮಾರುವವರಿಗಂತೂ ಈ ಸುದ್ದಿಯಿಂದ ಹರ್ಷ !

*　　*　　*　　*

ರಾಜ್ಯದಲ್ಲೆಲ್ಲ ಭಾರಿ ಮಳೆ

—ಸುದ್ದಿ

ಮಳೆಗಾಗಿ ಯಾವ ಯಜ್ಞವನ್ನೂ ಮಾಡದೆ ಇದ್ದುದೇ ಇದಕ್ಕೆ ಕಾರಣ ಇರಬಹುದು!

*　　*　　*　　*

ಪ್ರತಿಕೂಲ ವಾತಾವರಣ; ಪ್ರಧಾನಿ ಭೇಟಿ ರದ್ದು

—ಸುದ್ದಿ

ರಾಜಕೀಯ ವಾತಾವರಣವೋ ?

*　　*　　*　　*

ಬೆಂಗಳೂರಲ್ಲಿ ಯಾರಿಗಾದರೂ ಫೋನ್ ಮಾಡಿದರೆ ಇನ್ನಿಬ್ಬರು ಮಾತಾಡ್ತಿರೋದು ಕೇಳುತ್ತೆ ! ಹೀಗಿರುವಾಗ ಕದ್ದು ಕೇಳುವುದು ಹೇಗೆ ? ಅಂತ ಒಂದು ಪ್ರಶ್ನೆ !

*　　*　　*　　*

ಬಾಲ್ಟಿಮೋರ್ ದೂರದರ್ಶಕದಿಂದ ಹೊಸ ಗ್ರಹ ಕಂಡಿದೆಯಂತೆ.

—ಪತ್ರಿಕೆ

ಇನ್ನೇನು ಗ್ರಹಚಾರವೋ ?

*　　*　　*　　*

ಇಂಗ್ಲೆಂಡಿನಲ್ಲಿ ವಿಶ್ವ ಕನ್ನಡ ಮೇಳ; ರಾಜ್ಯದ ಮುಖ್ಯಮಂತ್ರಿಗಳಿಂದ ಉದ್ಘಾಟನೆ.

—ಸುದ್ದಿ

ಚಕ್ರವರ್ತಿ ನೀರೋನ ನೆನಪು ಬರುತ್ತಲ್ಲ !

O　　O　　O　　O



"ಮಳೆ ನಿಂತ್ರೂ ನೀರು ಸೋರೋದು ಮಾತ್ರಾ ನಿಂತಿಲ್ಲ. ಏನು ವಿಚಿತ್ರಾರೀ"

6

ಅಪರ ತಪರ ಅಪರಂಜಿಗೆಂದೇ—ಇದನು!

—ಶಿವರಾಮ ಕಾರಂತ

ವನವಾಸಿ ಮಣ್ಣಿನಲಿ ಹೊರಳಿದವರೆಲ್ಲರೂ
ಕವಿಗಳಾಗದೆ ಇರರು ಎಂದ ಪಂಪ.
ಹೀಗಾಗಿ ಹುಟ್ಟು ಗುಣದೊತ್ತರಕೆ
ಮೆರೆಸೆ ಕಾವ್ಯದ ಪೆಂಪ
ತೊದಲಿದರು, ಉಗುಳಿದರು
ಬೊಗಳಿದರು ಏನೇನೋ !
ಸರಸತಿಯ ಬೊಕ್ಕಸವ
ಕದ್ದು ಬಿದ್ದೆಲ್ಲ ಹುಡುಕಿ
ಬರೆದರೇ ಬರೆದರ್ರೈ !
ಬಾಚಿದ್ದೆಲ್ಲವು ಶಬುದ
ಗೀಚಿದ್ದೆಲ್ಲವು ನಾದ !
ಇದ ಕಂಡು ಒಂದು ದಿನ
ಮುಂದೆ ಹುಟ್ಟಿದ ಕೂಸು
ಆಯ್ತಾಯ್ತು ಕಂಗಾಲು !
ಬಿದ್ದಿತ್ತೈ ದುಂಬಾಲು.
'ಈ ನಾಡ ಕಪಿಗಳೂ ಕವಿಗಳೇ ;
ಎಂತು ಸಹಿಸಲಿ ನಾನು ! ?'
ಎಂದು ಮುಮ್ಮಲ ಮರುಗಿ
ಬಾಡಿತದು ಸೊರಗಿ
ಒಣವಾಸಿ ಬೀಸುತಿಹ

ಗಾಳಿಯನು ನೋಡಿ.
'ಅದು ನಾದವನೆ ಹೊತ್ತಿರಲಿ
ನಾತವನೆ ಹಬ್ಬಿಸಲಿ—
ಕಣ್ಣು ಕಿವಿ ಇಲ್ಲದವ
ಧನ್ಯಾತ್ಮ'ನೆಂದ 'ಪುಣ್ಯಾತ್ಮ'ನೆಂದ.



"ಇನ್ಶೂರೆನ್ಸ್ ಪ್ರೀಮಿಯಂ ಕಟ್ಟಿ ಬರೋವರ್ಗಾದರೂ ಬದುಕಿಸಿರು ಹೇ ಯಮದೇವ"

ವಕ್ರ ದೃಷ್ಟಿ

—ಆಮಲಕ

ಮಹಾಭಾರತದ ಉದ್ಯೋಗ ಪರ್ವದ ಒಂದು ಪ್ರಸಂಗ. ಶ್ರೀ ಕೃಷ್ಣ, ಕೌರವರು–ಪಾಂಡವರ ನಡುವೆ ರಾಜಿ ಮಾಡಿಸಲು ಪಾಂಡವರ ಪಾಳ್ಯದಿಂದ–ಹಸ್ತಿನಾಪುರಕ್ಕೆ ಹೊರಡುವ ಮೊದಲು ದ್ರೌಪದಿಗೆ ಗುಟ್ಟಾಗಿ ಹೇಳುತ್ತಾನೆ.

"ಏನೇ ಆಗಲಿ ಯುದ್ಧ ಗ್ಯಾರಂಟಿ—Don't worry"—ಕರ್ನಾಟಕದ—ಕೌರವರ–ಪಾಂಡವರ—ಸಂಧಾನವೂ ಮುರಿದು ಬಿತ್ತು. ಆದರೆ ಇದರಲ್ಲಿ ಶ್ರೀ ಕೃಷ್ಣ ಯಾರು ? ಆ ರಾಮಕೃಷ್ಣನೇ ಬಲ್ಲ !–ಅಲ್ಲ–ಆ ದೇವನೇ ಬಲ್ಲ !

O O O O

ಸಧ್ಯ—ಅಂತೂ—ಕೊನೆಗೂ–ಮುರಿದು ಬಿತ್ತಲ್ಲ—ಇನ್ನು ದಿನ ಪತ್ರಿಕೆಗಳಲ್ಲಿ ಬೇರೆಯ ವಿಷಯಗಳನ್ನು ಓದಬಹುದು—ಎಂದು ಓದುಗರು ಎಂದರೆ ?

ಅಯ್ಯೋ! ನಮಗೆ ಪ್ರಕಟಿಸಲು ಸಧ್ಯಕ್ಕೆ ಬೇರೆಯ ಧಾರವಾಹಿಯೇ ಇಲ್ಲವಲ್ಲ! ಎಂದು ಪತ್ರಿಕೆಯವರು ಪೇಚಾಡುತ್ತಿದ್ದಾರಂತೆ—ಹೌದಾದರೆ ಹೌದೆನ್ನಿ.

O O O O

ನಾಲ್ಕು ಪಕ್ಷಗಳು ಸೇರಿ S.J.D. ಹೊರಕ್ಕೆ ಬಂತು—ಅಲ್ಲ ಕಣ್ರೀ ಏಳು ಪಕ್ಷ ಸೇರಿ N. P. F. ಬಂತು—ಇದೇನು S. J. .D. ಯೋ—N. P. F. ಓ—ಯಾವುದಂ ಸರಿ—ಅವರನ್ನೇ ಕೇಳಬೇಕು. ಅವರಲ್ಲಿ ಯಾರನ್ನು ಕೇಳಬೇಕು ?

O O O O

ದೇವಿಲಾಲರೇ ನೀವು ಬಲ್ಲಿರಾ ?
N.T.R. ನೀವು ಬಲ್ಲಿರಾ ?
V.P.S. ನೀವು ಬಲ್ಲಿರಾ ?
ಬಹುಗುಣ ನೀವು ಬಲ್ಲಿರಾ ?

O O O O

ಒಬ್ಬೊಬ್ಬರನ್ನೇ ಕೇಳಿದರೆ ಒಂದೊಂದು ಹೇಳುವರು
ಎಲ್ಲರನ್ನು ಕೇಳಿದರೆ ಒಂದೇ ರಾಗ ಹಾಡುವರು
ಗುಟ್ಟಿನಲ್ಲಿ ಕೇಳಿದರೆ ನಾನೇ ಮುಂದಿನ ಪ್ರಧಾನಿ ಎಂಬುವರು
ಒಟ್ಟಿನಲಿ ಕೇಳಿದರೆ Collective leadership ಎಂಬುವರು

O O O O

ಈಗ ಜನರು ಏನು ಮಾಡಬೇಕು ? ಏನು ಮಾಡಬೇಕು ಎಂದರೆ ? ಕು. ವೆಂ. ಪು.ರವರ ಕಿಂದರ ಜೋಗಿ ಓದಿಲ್ಲವೆ ? ಜ್ಞಾಪಿಸಿಕೊಳ್ಳಿ. "ತಿಪ್ಪಂ ಭಟ್ಟರು ಚಿಂತಿಸಿ–ಚಿಂತಿಸಿ ದೇವರು ಮಾಡಿದ್ದಾಗಲಿ ಎಂದರು"

O O O O

ಅಂದ ಹಾಗೆ––ಜನತಾದ ಹಳೆಯ ಹುಲಿಯನ್ನು ನೋಡಿದರೆ ಅದೇ ಕಿಂದರ ಜೋಗಿಯ ಇನ್ನೊಂದು ಸಾಲು ಜ್ಞಾಪಕಕ್ಕೆ ಬರುತ್ತೆ, "ಮಂಗ್ಯೆ ಶೆಟ್ಟರು ಕೋಪವ ತಾಳಿ––ಮೆದುಳನು ನೀಡದೆ ತಲೆಯನು ಮಾಡಿದ ಕಮಲಜನನು ಬೈದಾಡಿದರು"

O O O O

ಪಾಪ–ಆ ಹುಲಿ–ನೇಪಥ್ಯದಲ್ಲಿ–ಇಷ್ಟು ದಿನ ಮಾಡಿದ ರಂಗತಾಲೀಮು ದಂಡವಾಯಿತು. ಹಾಗೆನ್ನಬೇಡಿ––ಯಾವ ಹುತ್ತದಲಿ ಯಾವ ಹಾವೋ ಯಾರು ಬಲ್ಲರು ?

O O O O

ಹೊಸ ಪಕ್ಷದ ವೈಶಿಷ್ಟ್ಯವೆಂದರೆ––Many equals have joined their heads to form one acceptable equality.

— Acceptable to whom ?
— To them ?
— To the country ?

ಎಂದು ನಾನು ಹಳೆಯ ಪಳಗಿದ ಪೇಪರ್ ಪಂಡಿತರನ್ನು ಕೇಳಿದಾಗ ಅವರೇನೆಂದರು ಗೊತ್ತೆ ?

O O O O

ಅಯ್ಯೋ ಕಂಟ್ರಿ ಯಾರಿಗೆ ಬೇಕೋ,ಕಂತ್ರಿ! ಬೇಕಾದರೆ ಕೇಳು-To them? ಗೆ ಉತ್ತರ ಬೇಕಾದರೆ_ನಾಳೆಯಿಂದ ದಿನಾ–ದಿನಪತ್ರಿಕೆ ಓದು.

'To the country ? ಗೆ ಉತ್ತರ' ಬೇಕಾದರೆ–ಮುಂದಿನ ಚುನಾವಣೆ ವರಗೆ ಕಾಯಿ–ನೀನು ಬದುಕಿದ್ದರೆ_ಹೊಸ ಪಕ್ಷ ಬದುಕಿದ್ದರೆ?' ಅಲ್ಲಿಯುವರೆಗೆ.

O O O O

ಈ ಹೊಸ ಪಕ್ಷಗಳ ಸಪ್ತವೇಣೀ ಸಂಗಮದಲ್ಲಿ–ಎಡ ಪಕ್ಷಗಳು–ಬಲ ಪಕ್ಷಗಳೂ ಸೇರಿಲ್ಲವಂತಲ್ಲ ! ಹಾಗಾದರೆ – ಎಡವೂ ಅಲ್ಲದ – ಬಲವೂ ಅಲ್ಲದ— ಈ ಪಕ್ಷಕ್ಕೆ ಎಬಡ–ಪಕ್ಷ ಎನ್ನಬಹುದೇ ?

O O O O

ಹೊಸ ಪಕ್ಷ_Unity in diversity–ಅನೇಕತಾ ಮೇ ಏಕತಾ_ಎನ್ನುವ ನಮ್ಮ ಭಾರತದ ತಲತಲಾಂತರದ ವೈಶಿಷ್ಟ್ಯವನ್ನು ಸಾರಿದೆಯಲ್ಲವೇ?

—ವೈಶಿಷ್ಟ್ಯವಲ್ಲವೇ—ಅಲ್ಲವೇ ? ಬೇಕಿದ್ದರೆ_ಪಂಜಾಬು ನೋಡಿ–ಅಸ್ಸಾಂ ನೋಡಿ––ಕಾಶ್ಮೀರ ನೋಡಿ––ತಮಿಳುನಾಡು ನೋಡಿ––ಯಾಕೆ ? ಕರ್ನಾಟಕ ಬೇಡವೇ ?_ಅಯ್ಯೋ! ಯಾಕೆ ಬೇಡ–ಅನ್ಯಮತೀಯರು ಭಿನ್ನ_ಮತೀಯರ ಬೀಡು– ಕನ್ನಡ ನಾಡು – ನೋಡಿ ಮೊಟ್ಟಮೊದಲು ನೋಡಿ.

O O O O

ಏಳು ಪಕ್ಷಗಳು ಸೇರಿದ–ಏಕ ಪಕ್ಷ–ಸಾರಿದ ಎಪ್ಪತ್ತೊಂದು ಸೂತ್ರಗಳು_ ಒಂದೊಂದು ಪಕ್ಷಕ್ಕೆ–ಹತ್ತು–ಹತ್ತು–ಕೊಸರಿಗೆ ಮೇಲೊಂದು.

The main manifesto of seven old heads is to fell the only one head that is the young head.

O O O O

"NIMHANSನಲ್ಲಿ ಅವ್ಯವಹಾರ" — ಸುದ್ದಿ — ಹೇಳಿ ಕೇಳಿ 'Nimhans' ಅಲ್ಲಿ ಹೋಗಿ ವ್ಯವಹಾರದ ಮಾತನಾಡಿದರೆ ಹೇಗೆ ?

O O O O

ಹಾಗಲ್ಲ—ಎಲ್ಲೆಲ್ಲೂ ಅವ್ಯವಹಾರವೇ ಕಂಡಾಗ–Nimhans ನಲ್ಲಾದ್ರೂ ವ್ಯವಹಾರ ಮಾಡೋಣಾ ಎಂದರೆ ?

—ಪಾಪಿ ಸಮುದ್ರ ಹೊಕ್ಕರೂ...... ...



"ಇದ್ನ ಕುಡಿದ್ರೆ ಸಾಯ್ತಾರಂತೋ !"
"ಬಿಡ್ಲಾ, ಈಗೇನು ಬದ್ಕಿದೀವಾ ?"

ಶೋಭಾ ಪ್ರಕರಣ

—ಎಚ್. ಡುಂಡಿರಾಜ್

ಒಂದೇ ಶಾಲೆಯಲ್ಲಿ ಒಂದೇ ಮಾತರಂ ಹಾಡಿ
ಒಂದೇ ಬೆಂಚಲ್ಲಿ ಕೂಡಿ ಅ ಆ ಇ ತಿದ್ದಿ
ಉರು ಹೊಡೆದು ಮಗ್ಗಿ ಕೀಟಲೆ ಮಾಡಿ
ಏಟು ತಿಂದವಳು. ಸಹಪಾಠಿ
ಪಾಟಿ ಒಡೆದವಳು. ಪುಸ್ತಕ ಹರಿದವಳು
ಆಡೋಟಗಳಲ್ಲಿ ಜತೆ ಜತೆಯಾಗಿ
ಬೆಳೆದವಳು ನನ್ನ ಶೋಭಾ

ಕಾಲೇಜಿನಲ್ಲಿ ಕಣ್ಣಿಗೆ ಬಿದ್ದ ಮೊದಲ ಬಣ್ಣ
ಎದೆಗೆ ನಾಟಿದ ಮೊತ್ತ ಮೊದಲ ಬಾಣ
ಹದಿಹರೆಯದ ಮೊದಲ ರೋಮಾಂಚನ
ನೀಡಿದಾಕೆ. ಕನಸಿನ ಕ್ಯಾನವಾಸಿನಲ್ಲಿ
ಮತ್ತೆ ಮತ್ತೆ ಮೂಡಿದಾಕೆ. ಅಳಿಸಲಾಗದ
ವರ್ಣ ವಿನ್ಯಾಸದಲ್ಲಿ ಅಚ್ಚಾದ ಚಿತ್ರಮಾಲಿಕೆ
ಆಕೆ ಅದೇ ಶೋಭಾ.

ಎಲ್ಲರೆದುರಲ್ಲಿ ಗಂಭೀರ ಮೌನ. ಕೇವಲ
ಸೌಜನ್ಯದ ನಗು. ಹೆಚ್ಚೆಂದರೆ ಕುಶಲ ಪ್ರಶ್ನೆಗಳು
ಮರೆಯಲ್ಲಿ ಎದೆಗೊರಗಿ ಕುಶಾಲು
ಹೊಡೆಸಿ ತೋಳಿನ ರೇಶ್ಮೆ ಶಾಲು, ಹಣ್ಣು ಹಾಲು

ಪ್ರೀತಿನಿಧಿಯಿತ್ತು ಸತ್ಕರಿಸಿದವಳು
ಸುಖದ ಸ್ವಪ್ನಗಳ ಸಾಕ್ಷಾತ್ಕರಿಸಿದವಳು
ಅವಳೂ ಅದೇ ಶೋಭಾ.

ಝಗಝಗಿಸುವ ಹಳದಿ ಜರತಾರಿಯುಟ್ಟು
ಮುಡಿ ತುಂಬ ಮಲ್ಲಿಗೆ ಜಲ್ಲಿ ಬಿಟ್ಟು
ಅಬ್ಬರದ ಆಭರಣಗಳ ತೊಟ್ಟು
ನಸುನಗುತ್ತ ಹಸೆಮಣೆಯೇರಿ
ಹಾಕುತ್ತಿದ್ದಾಳೆ ಮಾಲೆ, ನನ್ನದಲ್ಲದ ಕೊರಳಿಗೆ
ಹೌದು, ಅವಳೇ ಅವಳೇ
ಶೋಭಾನೆ, ಶೋಭಾನೆ, ಶೋ... - ಭಾ ...ನೇ......



"ಪಾಕಿಸ್ತಾನದಲ್ಲಿ ಜಿಯಾ ಹೋದದಕ್ಕೆ ಇವ್ರು ಮೂರು ದಿನ ಶೋಕ
ಅಂತ ರಜೆ ತೊಗೊಂಡು ಹೊದ್ದು ಮಲಗಿದ್ದಾರ್ರೀ"

ಕೊರವಂಜಿಯಿಂದ...



ಎಲ್ಲಿಗೆ ?

—ಗೋರೂರು ರಾಮಸ್ವಾಮಯ್ಯಂಗಾರ್

ನಾನೂ ಭಟ್ಟನೂ "ಕೋಪೀನ ಸ್ನೇಹಿತರೇ" ಆದರೂ ಈಚೆಗೆ ನಾನು ಬರೆಯುವ ವ್ಯಾಪಾರವನ್ನು ಪ್ರಾರಂಭಿಸಿದ ಮೇಲೆ ಭಟ್ಟ ನನ್ನನ್ನು ನಮ್ಮೂರಿನಲ್ಲಿ ಸಹ ಗಟ್ಟಿಯಾಗಿ 'ಗೊರೂರು ರಾಮಸ್ವಾಮಯ್ಯಂಗಾರ್' ಎಂದೇ ಕರೆಯುತ್ತಾನೆ. "ರಾಜಮಹಾರಾಜರ ವಂಧಿಮಾಗಧರಂತೆ ಇಷ್ಟು ಉದ್ದವಾದ ಹೆಸರಿನ ಹೊಗಳಿಕೆ ಯಾಕೆ ? ಸುಮ್ಮನೆ ಹಿಂದಲಂತೆ ರಾಮ ಎಂದು ಕರೆ' ಎಂದು ಭಟ್ಟನಿಗೆ ನಾನು ಹೇಳಿದುದು ಪ್ರಯೋಜನವಾಗಲಿಲ್ಲ. ಭಟ್ಟನು "ನಿನ್ನದಾದರೂ ನೀನಲ್ಲದೆ ಬೇರೆ ಯವರೇ ಉಪಯೋಗಿಸುವ ನಿನ್ನ ಪದಾರ್ಥ ಯಾವುದು ಗೊತ್ತೇ ? ಅದೇ ನಿನ್ನ ಹೆಸರು; ಉಪಯೋಗಿಸಿದಷ್ಟೂ ಹೆಚ್ಚು ಹೆಚ್ಚುತ್ತಲೇ ಇರುತ್ತದೆ. ಇದನ್ನು ಕುರಿತೇ ಉಪನಿಷತ್ತಿನಲ್ಲಿ 'ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣ ಮುದುಚ್ಯತೇ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ–ಪೂರ್ಣ ದಿಂದ ಪೂರ್ಣವನ್ನು ಕಳೆದರೆ ಪೂರ್ಣವೇ ಉಳಿಯುತ್ತದೆ–ಎಂದಿದ್ದಾರೆ" ಎಂದ. ನಾನು 'ಹೌದು ಪೂರ್ಣಮದಃ—ನೀನು ಪೂರ್ಣ ಮತನಾಗಿರುವುದು ನಿಜ' ಎಂದೆ.

ಭಟ್ಟನು ಹೀಗೆ ಎಲ್ಲೆಲ್ಲಿಯೂ ನನ್ನನ್ನು ನನ್ನ ಪೂರ್ಣ ಹೆಸರಿನಿಂದ ಗಟ್ಟಿ ಯಾಗಿ ಕೂಗುವುದರಿಂದ ಒಂದೊಂದು ಪ್ರಯೋಜನವೂ ಆಗಿದೆ. ಬಸ್ಸಿನಲ್ಲಿ ಭರ್ತಿ ಯಾಗಿದ್ದರೂ ಭಟ್ಟ ನನ್ನ ಹೆಸರನ್ನು ಹಿಡಿದು ಗಟ್ಟಿಯಾಗಿ ಕರೆದಾಗ ಒಂದೊಂದು ಸಲ ಜಾಗ ಸಿಕ್ಕಿರುವುದುಂಟು. ರೈಲು ಗಾಡಿಯಲ್ಲಿ ಭಟ್ಟ ನನ್ನ ಹೆಸರನ್ನು ಉಚ್ಚರಿಸಿ ದಾಗ, ಗ್ರಂಥಕರ್ತರ ಬಡತನದ–ಭಂಡತನದ ಅನುಭವವುಳ್ಳ ಅಚ್ಚಿನಮನೆಯ

ಮಾಲೀಕರ ಹೊರತು ಉಳಿದ ಕೆಲವರು ಗೌರವದಿಂದ ನನ್ನ ಕಡೆ ನೋಡಿದುದುಂಟು. ಭಟ್ಟ ಮಾತ್ರ "ನಿಮಗೇನು ಸ್ವಾಮಿ. ನಿಮ್ಮ ಹೆಸರೇ ಮಂತ್ರ. ನಿಮ್ಮ ಹೆಸರನ್ನು ಉಚ್ಚರಿಸಿದ ಕೂಡಲೇ ಹಾಕಿದ ಬಾಗಿಲು ತೆರೆಯುತ್ತದೆ. ಬಿದ್ದ ಘರದೆ ಏಳುತ್ತದೆ. ಹೊಡೆಯುವುದಕ್ಕೆ ಎದ್ದ ಕೈ ಸಲಾಮು ಮಾಡುತ್ತದೆ" ಎನ್ನುತ್ತಾನೆ. ನನಗೂ ಒಂದೊಂದು ಸಲ ಭಟ್ಟನ ಮಾತು ನಿಜವಿದ್ದರೂ ಇರಬಹುದೇನೊ ಎನ್ನಿಸುತ್ತದೆ. ಆಗ ನನ್ನ ತಲೆಯಮೇಲಿನ ಜವಾಬ್ದಾರಿಯಿಂದ ನನಗೆ ಭಯವಾಗಿ ನಾನು ಎಚ್ಚರಿಕೆಯಿಂದ ನಡೆದುಕೊಳ್ಳುತ್ತೇನೆ.

ಆ ದಿವಸ ನಾನು ಹಾಸನ ಸ್ಟೇಶನ್ನಿನಿಂದ ಮೈಸೂರಿಗೆ ಹೊರಟಾಗ ಭಟ್ಟನೂ ರೈಲ್ವೆ ಸ್ಟೇಶನ್ನಿಗೆ ನನ್ನನ್ನು ಕಳುಹಿಸಲು ಬಂದಿದ್ದ. ನನ್ನ ಜತೆಯಲ್ಲಿರುವಾಗ ಭಟ್ಟ, ಸಾಧಾರಣವಾಗಿ ಗಟ್ಟಿಯಾಗಿಯೇ ಕೂಗಿ ಮಾತನಾಡುತ್ತಿರುತ್ತಾನೆ. ಜನರ ದೃಷ್ಟಿ ನಮ್ಮ ಕಡೆಗೆ ಬೀಳಲಿ ಎಂದಿರಬಹುದು. ಹಾಸನದ ಸ್ಟೇಶನ್ನಿನಲ್ಲಿ ಟಿಕೆಟ್ ತೆಗೆದುಕೊಳ್ಳಲು ಕ್ಯೂನಲ್ಲಿ ಬಹಳ ಜನ ನಿಂತಿದ್ದರು. ನಾನೂ ಗುಂಪಿನ ಹಿಂದೆ ಅರವತ್ತನೆಯವನೋ ಎಪ್ಪತ್ತನೆಯವನೋ ಆಗಿ ನಿಂತಿದ್ದೆ. ಜನ ನಿಧಾನವಾಗಿ ಮುಂದಕ್ಕೆ ಸರಿಯುತ್ತಿದ್ದರು. ನಿಂತು ನಿಂತು ನನಗೆ ಬೇಸರಿಕೆ ಆಯಿತು. ನಾನು ಭಟ್ಟನಿಗೆ "ಇನ್ನೂ ಒಂದು ಗಂಟೇ ಬೇಕು. ಟಿಕೆಟ್ ಸಿಕ್ಕಲು" ಎಂದೆ. ಭಟ್ಟನು "ನಿಮಗ್ಯಾಕೆ ಸ್ವಾಮಿ ಈ ಕ್ಯೂನಲ್ಲಿ ಫಜೀತಿ ? ನಿಮ್ಮ ಹೆಸರು ಹೇಳಿದರೆ ಆಕಡೆಯಿಂದಲೇ ಹೋಗಿ ತೆಗೆದುಕೊಳ್ಳಬಹುದು" ಎಂದ. ನಾನು "ಆ ಕಡೆ ಪ್ರವೇಶ ವಿಲ್ಲ ಎಂದು ಬರೆದಿದೆ" ಎಂದೆ. ಭಟ್ಟನು "ಅದೆಲ್ಲಾ ನಮಗೆ" ಎಂದು ನಕ್ಕ.

ಆ ಘಳಿಗೆಯಲ್ಲಿ ನನಗೆ "ಇದ್ದರೂ ಇರಬಹುದು ನನ್ನ ಹೆಸರಿಗೆ ಸ್ವಲ್ಪ ಮಹಿಮೆ" ಎನ್ನಿಸಿತು. ನಮ್ಮ ದೇಹವನ್ನು ಕಲಿ ಪ್ರವೇಶಿಸಬೇಕಾದರೆ ನಾವು ಅಶುದ್ಧರಾಗಿರುವ ಕಾಲದಲ್ಲಿ ಪ್ರವೇಶಿಸುತ್ತಾನಂತೆ. ಅಹಂಕಾರವೇ ಅಶುದ್ಧಿ. ಆ ಗಳಿಗೆಯಲ್ಲಿ ಕಲಿ ನನ್ನಲ್ಲಿ ಪ್ರವೇಶಿಸಿದನು.

ನನ್ನ ಹಿಂದೆ ನಿಂತಿದ್ದ ಪ್ರಯಾಣಿಕರೊಬ್ಬರು "ಸ್ವಾಮಿ ನೀವು ಎಲ್ಲಿಗೆ ?" ಎಂದರು. ಯಾರಾದರೂ ನೀವು ಎಲ್ಲಿಗೆ ಎಂದು ಕೇಳಿದರೆ ಅಪಶಕುನವೆಂದು ನಮ್ಮ ಪೂರ್ವಿಕರು ಹೇಳುತ್ತಿದ್ದರು. ನಮ್ಮ ಊರು ಸಾಹುಕಾರರು 'ಎಲ್ಲಿಗೆ' ಎಂದು ಯಾರಾದರೂ ಕೇಳಿದರೆ ಹೇಳುತ್ತಿರಲಿಲ್ಲ. ಹಾಸನದ ಕಡೆ ಹೊರಟಿದ್ದರೆ "ನರಸೀಪುರಕ್ಕೆ" ಎನ್ನುತ್ತಿದ್ದರು. "ಯಾವ ಹುತ್ತದಲ್ಲಿ ಯಾವ ಹಾವು ಇದೆಯೋ, ನಮ್ಮ ಎಚ್ಚರಿಕೆ ನಮ್ಮ ಕೈಯಲ್ಲಿರಬೇಕು" ಎನ್ನುತ್ತಿದ್ದರು. ಆದರೆ ಆಧುನಿಕರಾದ ನಾವು ಇರುವುದನ್ನು ಇರುವಂತೆ ಹೇಳಿಬಿಡುತ್ತೇವೆ. ಯಾರಾದರೂ

"ನೀವು ಎಲ್ಲಿಗೆ ಹೊರಟಿರಿ" ಎಂದ ಕೂಡಲೆ ಪೆಚ್ಚರಾಗಿ ಸತ್ಯ ಹೇಳಿಬಿಡಬೇಡಿ. "ಸತ್ಯಕ್ಕೆ ಬೆತ್ತಲೆ" ಎಂಬ ಗಾದೆ ನಿಮಗೆ ಜ್ಞಾಪಕವಿರಲಿ. ಅವಧರಿಸಿ.

ನನ್ನ ಹಿಂದೆ ನಿಂತಿದ್ದವರು ಮತ್ತೆ "ಸ್ವಾಮಿ ? ನೀವು ಎಲ್ಲಿಗೆ ?" ಎಂದರು. "ಮೈಸೂರಿಗೆ" ಎಂದೆ. ಕೂಡಲೇ ಅವರ ಮುಖದಲ್ಲಿ ನಗುವೂ ನನ್ನನ್ನು ಕುರಿತ ಪ್ರಶ್ನ ಮುಖಭಾವವೂ ಉಂಟಾಯಿತು. ನಾನು ಏನೊಂದನ್ನೂ ಯೋಚಿಸುವುದಕ್ಕೆ ಮುಂಚೆಯೇ ಅವರು ನನ್ನ ಎರಡು ಬೆರಳುಗಳ ಸಂದಿನಲ್ಲಿ ನಾನು ಹಿಡಿದಿದ್ದ ಐದು ರೂಪಾಯಿ ನೋಟನ್ನು ಸರಕ್ಕನೆ ತೆಗೆದುಕೊಂಡು ಬಿಟ್ಟರು. "ಟಿಕೇಟ್ ತರುತ್ತೇನೆ, ನನಗೂ ಮೈಸೂರಿಗೆ" ಎಂದರು. ಭಟ್ಟ ನನಗೆ "ಬನ್ನಿ ಸ್ವಾಮಿ ದೀಪ ಎಲ್ಲಿದ್ದರೂ ಪ್ರಕಾಶವೆ" ಎಂದು ಹೇಳಿ ಅಲ್ಲೇ ಇದ್ದ ಬೆಂಚಿನ ಮೇಲೆ ನನ್ನ ಮಗ್ಗುಲಲ್ಲಿ ಕುಳಿತನು.

ಕ್ಯೂ ಕ್ರಮವನ್ನು ಕಂಡುಹಿಡಿದ ಮಹರಾಯ ಬಲು ಬುದ್ಧಿವಂತ. ಇಲ್ಲದಿದ್ದರೆ ನುಗ್ಗಾಟ ತಿಕ್ಕಾಟದಲ್ಲಿ ಜನಕ್ಕೆ ನಿತ್ಯಾ ಎಷ್ಟು 'ಜಖಂ' ಆಗುತ್ತಿತ್ತೊ! ಆದರೆ ಈ ಕ್ಯೂವನ್ನು ಕಂಡುಹಿಡಿದವನು, ಒಳಗಿರುವವನು ಸರಸರನೆ ಟಿಕೆಟ್ ಕೊಡಬೇಕು ಎಂಬುದನ್ನು ಮಾತ್ರ ಹೇಳಲಿಲ್ಲ. ಒಂದು ಪಕ್ಷದವರ–ಅಂದರೆ ಜನರ ನಡತೆಯಲ್ಲಿ ಆಗಬೇಕಾದ ಬದಲಾವಣೆಯನ್ನು ಹೇಳಿದನೇ ಹೊರತು ಮತ್ತೊಂದು ಪಕ್ಷದವರ ಅಂದರೆ ಟಿಕೆಟ್ ಕೊಡುವವರ ಪಕ್ಷದಲ್ಲಿ ಆಗಬೇಕಾದ ಬದಲಾವಣೆ ಹೇಳಲಿಲ್ಲ. ಅಂತೂ ಅರ್ಧಗಂಟೆಯ ಹೊತ್ತಿನಲ್ಲಿ ನನ್ನ ರೂಪಾಯಿಗಳನ್ನೂ ತೆಗೆದುಕೊಂಡು, ಟಿಕೆಟ್ಟಿಗಾಗಿ ಹೋಗಿದ್ದವರು ಬಂದರು. ಟಿಕೆಟ್ಟನ್ನೂ ಚಿಲ್ಲರೆಯನ್ನೂ ಜೋಬಿಗೆ ಹಾಕಿಕೊಂಡು "ಬಂದ" ಎಂದು ಹೇಳಿ ಹೊರಟುಹೋದರು. ನಾನು "ನನ್ನ ಟಿಕೆಟ್ ಚಿಲ್ಲರೆ ನನ್ನ ಕೈಲಿ ಕೊಟ್ಟು ಹೋಗಬಹುದಾಗಿತ್ತು ಎಂದೆ. ಭಟ್ಟನು 'ನಿಮಗೆ ಯಾಕೆ ಯೋಚನೆ ? ಕುಡಿದ ನೀರು ಅಲ್ಲಾಡದಂತೆ ನಿಮ್ಮನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಬಿಡುತ್ತಾನೆ' ಎಂದ.

ಇನ್ನೇನು ರೈಲು ಬರುವ ಹೊತ್ತಾಯಿತು. ನನ್ನ ಟಿಕೆಟ್ ತೆಗೆದುಕೊಂಡಿದ್ದವರು ಲಗ್ಗೇಜ್ ತಕ್ಕಡಿಯಮೇಲೆ ಎರಡು ಗಂಟುಗಳನ್ನಿಟ್ಟು ತೂಕಮಾಡಿಸುತ್ತಿದ್ದರು. ತೂಕವಾದ ನಂತರ ರೈಲ್ವೆ ಆಳು ಗಂಟುಗಳನ್ನು ತಕ್ಕಡಿಯಿಂದ ಕೆಳಕ್ಕೆ ತಳ್ಳಿದ. ಭಟ್ಟ "ಹಾಗಾದಮೇಲೆ ಹೋಗಿ ಬನ್ನಿ" ಎಂದು ಹೇಳಿ ಎದ್ದ. ನನ್ನ ಟಿಕೆಟ್ ನನ್ನ ಸ್ನೇಹಿತರ ಕೈಯಲ್ಲಿಯೇ ಇತ್ತು. ಬಾಗಿಲಿನಲ್ಲಿ ಟಿಕೆಟ್ ಪರೀಕ್ಷಿಸುತ್ತಾ ನಿಂತಿದ್ದ ಗುಮಾಸ್ತರು "ಆ ಎರಡು ಗಂಟು ಯಾರವು?" ಎಂದರು. ನನ್ನ ಸ್ನೇಹಿತರು ತಮ್ಮ ಜೇಬಿನಿಂದ ಎರಡು ಮೈಸೂರು ಟಿಕೆಟ್‌ಗಳನ್ನೂ ಅವೆರಡಕ್ಕೂ

ಸಂಬಂಧಿಸಿದಂತಿದ್ದ ಎರಡು ಪಾಸ್‌ಗಳನ್ನು ತೋರಿಸಿದರು. ಟಿಕೆಟ್ ಕಲೆಕ್ಟರು "ಆ ಟಿಕೀಟು ಯಾರದು ?" ಎಂದು ಕೇಳಿದ. ನನ್ನ ಮಿತ್ರರು "ಇವರೇ, ನಮ್ಮ ವರೇ" ಎಂದರು. ಹಾಗಾದರೆ ಅವರ ಟಿಕೆಟ್ ಅವರ ಕೈಲಿ ಕೊಡಿ" ಎಂದ. ಅನಂತರ ತಪ್ಪಿತಸ್ಥ ಸಿಕ್ಕಿದಾಗ ರೈಲ್ವೆಯವರೂ ಪೋಲೀಸಿನವರೂ ಅವಲಂಬಿಸುವ ದುರಾಸೆಯ ಮುಖಭಾವದಿಂದ "ಅವರ ಟಿಕೇಟಿನಲ್ಲಿ ನಿಮ್ಮ ಲಗೇಜನ್ನು ಸಾಗಿಸು ತ್ತೀರೋ?" ಎಂದ. ನನಗೆ "ಒಳ್ಳೆಯ ಪೀಕಲಾಟಕ್ಕೆ ಬಂತಲ್ಲ" ಎಂಬ ಭಯ ವಾಯಿತು. ಏನು ಜವಾಬ್ ಕೊಡಲಿ ಎಂದು ನಾನು ಯೋಚಿಸುತ್ತಿರುವಾಗ ನಮ್ಮ ಸ್ನೇಹಿತರು "ಇಲ್ಲ ಸಾರ್, ಸಾಮಾನೂ ಅವರದೇ" ಎಂದರು. ಟಿಕೆಟ್ ಕಲೆಕ್ಟರರು "ಹಾಗಾದರೆ ಅವರ ಸಾಮಾನು ಅವರು ತೆಗೆದುಕೊಂಡು ಹೋಗಲಿ. ಅವರ ಕೈಲಿ ಕೊಡಿ" ಎಂದ. ನನಗೆ ನನ್ನ 'ಸ್ನೇಹಿತ'ರ ಮೇಲೆ ಅಸಾಧ್ಯ ಕೋಪವುಂಟಾಯಿತು. ಅವರು ಮಾತ್ರ ಸ್ವಲ್ಪ ವಿನಯದ ಮುಖಭಾವವನ್ನು ಮಾಡಿಕೊಂಡು "ಸಾರ್ ಒಂದು ಗಳಿಗೆ ತೆಗೆದುಕೊಳ್ಳಿ" ಎಂದರು. ಒಂದು ಗಂಟನ್ನು ನನ್ನ ಹೆಗಲಿನಮೇಲೆ ಹೊರಿಸಿಯೇ ಬಿಟ್ಟರು. ಟಿಕೆಟ್ ಕಲೆಕ್ಟರರಿಗೂ ಸ್ವಲ್ಪ "ಕಾಫಿ ಖರ್ಚು" ದೊರೆತಿದ್ದಿರಬೇಕು.

ನಾನು ಸಾಧಾರಣವಾಗಿ ಪ್ರಯಾಣ ಕಾಲದಲ್ಲಿ ಯಾವ ಗಂಟನ್ನೂ ಹೆಚ್ಚಾಗಿ ತೆಗೆದುಕೊಂಡು ಹೋಗುವುದಿಲ್ಲ. "ಹಗುರವಾಗಿ ಪ್ರಯಾಣ" ಮಾಡುವುದು ನನ್ನ ಸ್ವಭಾವ. ಒಂದು ಕೈ ಚೀಲದಲ್ಲಿ ಒಂದು ಪಂಚೆ, ದುಪಟಿ. ಇವೇ ನನ್ನ "ಮಸ್ಟ್‌ಕಿಟ್, (must kit) ಯಾಕೆಂದರೆ ಹೋಲ್ಡ್ ಆಲ್‌ನಲ್ಲಿ ಒಂದು ಗಾಡಿ ಹಿಡಿಯುವಷ್ಟು ಸಾಮಾನನ್ನು ಹಾಕಿಕೊಂಡು ಊರಿಂದ ಊರಿಗೆ ಹೊರಟರೆ ರೈಲುಛಾರ್ಜಿಗಿಂತ ಜಟಕಾ ಕೂಲಿಗಳ ಬಾಡಿಗೆ ಅಧಿಕವಾಗುತ್ತದೆ. ಆಂಜನೇಯ ಬೆಟ್ಟವನ್ನು ಹೊತ್ತಂತೆ, ತಮಗಿಂತ ನಾಲ್ಕರಷ್ಟು ಭಾರವಾದ ಹಾಸಿಗೆ ಹೊತ್ತು ಕೊಂಡು ಏದುತ್ತಾ ರೈಲ್ ಕಿಟಕಿಯಲ್ಲಿ ಆ ಹಾಸಿಗೆ ತೂರಿಸುವವರನ್ನು ನೋಡಿ ನನಗೆ ಕನಿಕರವುಂಟಾಗಿದೆ. ಒಂದೇ ಕೈನಲ್ಲಿ ಹಗುರವಾಗಿ ನನ್ನ ಗಂಟನ್ನು ಹಿಡಿದು ಕೊಂಡು ಸಿಪಾಯಿಯ ಹಾಗೆ ಸರ್ರನೆ ರೈಲಿಗೆ—ರೈಲಿನಿಂದ ಇಳಿದು—ಹೋಗುವುದು ನನ್ನ ಪದ್ಧತಿ. ಭಾರದ ಭಯಕ್ಕೆ ಒಂದು ಟವಲನ್ನು ಸಹ ಹೆಚ್ಚಾಗಿ ತೆಗೆದು ಕೊಳ್ಳದ ನಾನು ಏದುಸಿರು ಬಿಡುತ್ತಾ ನನ್ನ ಮಿತ್ರರ ಗಂಟನ್ನು ಹೊತ್ತುಕೊಂಡೆ. ಹಿಂದಿರುಗಿ ನೋಡಿದಾಗ ಭಟ್ಟ ಇನ್ನೂ ಅಲ್ಲಿಯೇ ನಿಂತಿದ್ದ. ನನ್ನ ಮಹಿಮೆ ಯನ್ನು ಕೊಂಡಾಡುವ ಅವನಿಗೆ ಸಹ "ಅಷ್ಟಲ್ಲದೆ ಇವರಿಗೆ ಅವರು ಸುಮ್ಮನೆ ಟಿಕೆಟ್ ತಂದುಕೊಡುತ್ತಾರೆಯೆ?" ಎಂದು ತೋರಿರಬೇಕು. ನನಗೆ ಅವನ ಮುಖದಲ್ಲಿ ಕನಿಕರಕ್ಕಿಂತ ಚೇಷ್ಟೆಯೇ ಹೆಚ್ಚಾಗಿ ತೋರಿತು.

ನನ್ನ ಸ್ನೇಹಿತರು ಗಾಡಿಯೊಳಕ್ಕೆ ಹೋಗಿ ಮೊದಲು ತಮ್ಮ ಗಂಟನ್ನು ಮೇಲೆ ಇಟ್ಟು, ಕಿಟಕಿಯಿಂದ ನನ್ನದನ್ನು ತೆಗೆದುಕೊಂಡರು. ನನ್ನ ತಲೆಯು ಮೇಲಿದ್ದ ಆ ಉದ್ದವಾದ ಗಂಟನ್ನು ಕಿಟಕಿ ಮೂಲಕ ಎಳೆದುಕೊಳ್ಳುವಾಗ ಕಿಟಿಕಿಯ ಬಳಿ ಕುಳಿತಿದ್ದವರೊಬ್ಬರಿಗೆ ಅದು ತಗಲಿತು. ಅವರು ನನ್ನನ್ನೇ ನುಂಗುವಂತೆ ನೋಡುತ್ತಾ "ಗೂಡ್ಸ್‌ಗಾಡಿಗೆ ಯಾಕೆ ಹಾಕಬಾರದು ? ಎಲ್ಲಿ ನೋಡಿದರೂ ಈ ಬ್ಲಾಕ್ ಮಾರ್ಕೆಟ್'ನವರ ಕಾಟ" ಎಂದರು. ನನಗೆ ಮತ್ತೆ ನನ್ನ 'ಮಿತ್ರರ' ಮೇಲೆಯೇ ಕೋಪವುಂಟಾಯಿತು. ಆದರೆ ಅವರು ಪ್ರಸನ್ನರಾಗಿ ನನ್ನ ಚಿಲ್ಲರೆ ನನಗೆ ಕೊಟ್ಟು "ನೋಡಿಸಾರ್ ನಿಮ್ಮ ಟಿಕೆಟ್‌ನಲ್ಲಿ ಮಾಡಿಸಿದುದರಿಂದ ನನಗೆ ಹದಿಮೂರಾಣೆ ಉಳಿಯಿತು. ಲಗೇಜ್ ಛಾರ್ಜು ಬಹಳ ದುಬಾರಿ ಸಾರ್. ಏನೋ ನೀವು ಪರಿಚಿತರಲ್ಲದಿದ್ದರೂ ದಯವಿಟ್ಟುದರಿಂದ ಸರಿಯಾಯಿತು. ಇಲ್ಲದಿದ್ದರೆ ಇನ್ನೂ ಒಂದು ರೂಪಾಯಿ ಲಗ್ಗೇಜ್‌ಗೆ ಕಕ್ಕಬೇಕಾಗಿತ್ತು......ಸರಿಯಾಗಿ ವಿಶಾಲವಾಗಿ ಕೂತ್ಕೋಳಿ ಸಾರ್' ಎಂದರು. "ಇನ್ನು ಮೈಸೂರಿಗೆ ಹೋಗುವವರೆಗೆ ಇವರ ಹತ್ತಿರ ಮಾತು ಬೇಡ" ಎಂದು ನಾನು ಕಣ್ಣುಮುಚ್ಚಿಕೊಂಡು ಕುಳಿತೆ. ಪ್ರಯಾಣಿಕರಲ್ಲಿ ಒಬ್ಬಿಬ್ಬರು ನನ್ನನ್ನು "ಆ ಗಂಟಿನಲ್ಲಿರುವುದೇನು ?" ಎಂದರು. ನಾನು ಪ್ರತ್ಯುತ್ತರ ಕೊಡದೆ ಸುಮ್ಮನೆಯೇ ಕುಳಿತಿದ್ದೆ.

ರಾತ್ರಿ ಎಂಟುವರೆ ಗಂಟೆಗೆ ರೈಲು ಕೃಷ್ಣರಾಜ ನಗರ ಸ್ಟೇಷನ್ನಿಗೆ ಬಂದಿತು. ಮೈಸೂರು ಗಡಿಗೆ ಬಂದ ಕೂಡಲೇ 'ಬ್ಲಾಕ್ ಮಾರ್ಕೆಟ್'ನವರ ಎದೆ ನಡುಗುತ್ತೆ ಎಂದು ಜನ ಹೇಳುತ್ತಾರೆ. ಕೃಷ್ಣರಾಜ ನಗರದಲ್ಲಿ ನಮ್ಮ ಗಾಡಿಯೊಳಕ್ಕೆ ಒಬ್ಬ ಪೋಲೀಸಿನವನು ಬಂದ. ಮೇಲೆ ಇದ್ದ ಗಂಟುಗಳನ್ನೆಲ್ಲಾ ನೋಡಿದ. ನಮ್ಮ ಸ್ನೇಹಿತರು ಇಟ್ಟಿದ್ದ ಗಂಟನ್ನು ನೋಡಿ "ಇದು ಯಾರದು ?" ಎಂದ. ಅವರು "ನನ್ನದು" ಎಂದರು. ಅನಂತರ ನಮ್ಮ ಸ್ನೇಹಿತರು ಇಡಿಸಿದ್ದ ನನ್ನ ಗಂಟನ್ನು ನೋಡಿ "ಇದು ಯಾರದು?" ಎಂದ. ನಾನು ಕಣ್ಣುಮುಚ್ಚಿಕೊಂಡು ಸುಮ್ಮನೆಯೇ ಕುಳಿತಿದ್ದೆ. ನಮ್ಮ ಸ್ನೇಹಿತರು ಒಂದೆರಡು ಸಲ ನನ್ನನ್ನು ತಿವಿದರು. ನಾನು "ಗಂಟು ನನ್ನದು" ಎಂದೆ. ಆತ 'ಅದರಲ್ಲಿರುವುದೇನು ?' ಎಂದ. ನನಗೆ ಕೋಪ ಬಂತು. "ಗಂಟು ನನ್ನದಲ್ಲ ಬೇಕಾದ್ದು ಮಾಡಿಕೊಳ್ಳಿ" ಎಂದು ಹೇಳಬಿಡಬೇಕೆಂದು ಹೊರಟೆ. ಈ 'ಕಿರುಕುಳವೆಲ್ಲಾ ನನಗೆ ಯಾಕೆ? ಅವರ ಪಾಡು, ಎಂದು ನಾನು ಬಾಯಿ ತೆಗೆಯುವುದರಲ್ಲಿ ನನ್ನ ಸ್ನೇಹಿತರು "ಏನೂ ಇಲ್ಲ ಸಾರ್ ಸಂಸಾರದ ಉಪಯೋಗಕ್ಕೆ ಬಟ್ಟೆ" ಎಂದರು. ಪೋಲೀಸಿನವನು ಅವರ ಕಡೆ ದುರದುರನೆ ನೋಡುತ್ತಾ "ನಿಮಗೇನು ಸುಮ್ಮನಿರಿ. ಅವರು ಹೇಳುತ್ತಾರೆ" ಎಂದ. ಅನಂತರ ಸ್ವಲ್ಪ ಜೋರಾಗಿಯೇ ನನ್ನನ್ನು "ಅದರಲ್ಲಿರುವುದೇನು ?" ಎಂದು ಗದರಿಸಿದ. ನಾನು ಜವಾಬುಕೊಡುವುದಕ್ಕೆ ಮುಂಚಿತವಾಗಿ "ನೀವು ಇಳೀರಿ.

ನನಗೆ ಅನುಮಾನವಾಗಿದೆ. ಪೋಲೀಸ್ ಸ್ಟೇಷನ್ನಿಗೆ ಹೋಗಬೇಕು' ಎಂದ. ಗಂಟು ನನ್ನದಲ್ಲ ಎಂಬುದರ ಹೊರತು ಉಳಿದ ಅನೇಕ ವಾದಗಳನ್ನು ನಾನು ಮಾಡಿದೆ. ಏನೂ ಪ್ರಯೋಜನವಾಗಲಿಲ್ಲ. ಪೋಲೀಸಿನವನು ನನ್ನ ಟಿಕೆಟ್ಟನ್ನೂ ಗಂಟನ್ನೂ ತೆಗೆದುಕೊಂಡ. ನನ್ನ ಸ್ನೇಹಿತರು 'ಬಟ್ಟೆ ಸ್ವಂತ ಉಪಯೋಗಕ್ಕೆ' ಎಂದು ಹೇಳಿ ಸಾರ್. ಬೆಳಗಿನ ರೈಲಿನಲ್ಲಿ ಬಂದು ಬಿಡಿ. ನಿಮ್ಮನ್ನೇ ಕಾಯ್ದುಕೊಂಡು ನಂಜರಾಜ ಬಹದ್ದೂರ್ ಛತ್ರದಲ್ಲಿರುತ್ತೇನೆ" ಎಂದ. ನನಗೆ ಅವನನ್ನು ಕೊಲ್ಲು ವಷ್ಟು ಕೋಪ ಬಂದಿದ್ದುದರಿಂದ ನಾನು ಏನು ಮಾತನಾಡಲಿಲ್ಲ. ರೈಲು ಹೊರಟೇ ಹೋಯಿತು.

ಆ ರಾತ್ರಿ ನಾನು ಪೋಲಿಸ್ ಸ್ಟೇಷನ್ನಿನಲ್ಲಿ ಸೊಳ್ಳೆಗಳ ಕೈಯಲ್ಲಿ ಮೈ ಅಗಿಸಿ ಕೊಂಡೆ. ಪೋಲಿಸ್ ಇನಿಸ್ಪೆಕ್ಟರು ಮರುದಿನ ಬೆಳಿಗ್ಗೆ ಖೂನಿ ಮೊಕದ್ದಮೆಯ ತನಿಕೆಗೆ ಬೇರ ಊರಿಗೆ ಹೋದುದರಿಂದ ರಾತ್ರಿಯವರೆಗೆ ಬರಲಿಲ್ಲ. ಉಳಿದ ಪೋಲೀಸಿನವರು ನನ್ನ ವಂಶ ಕುಲ ಗೋತ್ರ ಪೂರ್ವಾಪರಗಳನ್ನೆಲ್ಲಾ ಕೇಳಿ ತಿಳಿದು ಕೊಂಡರು. ಬಟ್ಟೆಯ ಗಂಟನ್ನು ಬಿಚ್ಚಿದಾಗ ಅದರಲ್ಲಿ ಬ್ಲಾಕ್‌ಮಾರ್ಕೆಟ್ಟಿನ ಪದಾ ರ್ಥಗಳಾವುವೂ ಇರಲಿಲ್ಲ. ಆ ರಾತ್ರಿ ಪೋಲೀಸ್ ಇನ್‌ಸ್ಪೆಕ್ಟರು ಬಂದರು. ನನಗೆ ಒಂದು ದಿನದಿಂದ ಆದ ಕಷ್ಟಕ್ಕೆ ಮರುಗಿದರು. ನನ್ನನ್ನು ಯಾಕೆ ರೈಲಿನಿಂದ ಇಳಿಸಿದರು ಎಂಬುದು ಅವರಿಗೂ ಗೊತ್ತಾಗಲಿಲ್ಲ. ಪೋಲೀಸ್ ಕಾನಿಸ್ಟಬಲ್ "ಇವರ ನಡತೆ ಸಂಶಯಾಸ್ಪದವಾಗಿತ್ತು ಎಂದ. ಹಾಸನ ಸ್ಟೇಷನ್‌ನಲ್ಲಿ ನಾನು ಗಂಟು ನನ್ನದಲ್ಲ ಎಂದು ಹೇಳದಿದ್ದುದರಿಂದ ಹಿಡಿದು ನನ್ನ ನಡತೆ ಸಂಶಯಾತ್ಮಕ ಎಂಬುದು ನನಗೇ ತೋರಿತು. ಯಾವದೋ ರೂಪದಲ್ಲಿ ಮಾಡಿದ ತಪ್ಪಿಗೆ ಯಾವ ರೂಪದಲ್ಲಿಯೋ ಶಿಕ್ಷೆಯಂತೂ ಆಗುತ್ತೆ ಎಂದುಕೊಂಡೆ.

ಮರುದಿನ ರಾತ್ರಿ ರೈಲು ಹತ್ತಿ ಮೈಸೂರು ಕಡೆಗೆ, ಗಂಟಿನೊಂದಿಗೆ ಹೋಗು ತ್ತಿರುವಾಗ ಸಾಗರಕಟ್ಟೆ ಸೇತುವೆಯ ಕೆಳಕ್ಕೆ ಆ ಗಂಟನ್ನು ಎಸೆದುಬಿಡಬೇಕೆಂಬ ಆಸೆಯನ್ನು ಅದುಮುವುದು ಬಹಳ ಕಷ್ಟವಾಯಿತು. ಗಾಡಿಯಲ್ಲಿ ನಾನು ಒಬ್ಬನೇ ಇದ್ದಿದ್ದರೆ ಹಾಗೆಯೇ ಮಾಡುತ್ತಿದ್ದೆ. ಇತರ ಪ್ರಯಾಣಿಕರ ಭಯದಿಂದ ನನ್ನ ಆಸೆಯನ್ನು ಇಂಗಿಸಿಕೊಂಡೆ. ಮೈಸೂರು ಸ್ಟೇಷನ್‌ನಲ್ಲಿ ಇಳಿದನಂತರ, ಭಾರದ ಭಯಕ್ಕೆ ಒಂದು ಪಂಚೆಯನ್ನು ಸಹ ಪ್ರಯಾಣಕಾಲದಲ್ಲಿ ಹೆಚ್ಚಾಗಿ ತೆಗೆದುಕೊಳ್ಳದ ನಾನು ಒಂದು ಜಟಕಾದಲ್ಲಿ ನಂಜರಾಜ ಬಹದ್ದೂರ್- ಛತ್ರಕ್ಕೆ ಹೋದೆ. ಅಲ್ಲಿ ನನ್ನ "ಸ್ನೇಹಿತರು" ನನ್ನನ್ನೇ ಕಾಯುತ್ತಾ ಕುಳಿತಿದ್ದರು. ನನ್ನನ್ನು ನೋಡಿದ ಕೂಡಲೆ 'ಏನುಸಾರ್' ಬೆಳಗಿನ ಬಸ್‌ನಲ್ಲಿ ಹುಣಸೂರಿಗೆ ಹೋಗಬೇಕಾಗಿತ್ತು, ನೀವು ಬರಲಿಲ್ಲ. ಒಂದುದಿನ ಅನ್ಯಾಯವಾಗಿ ನಿಂತುಬಿಟ್ಟೆ" ಎಂದರು. ಆಗ

ಏನಾದರೂ ಸಾಗರ ಕಟ್ಟೆ ಎದುರಾಗಿ ಸಿಕ್ಕಿದ್ದರೆ ನಾನು ಖಂಡಿತವಾಗಿ ಗಂಟನ್ನು ಅದರೊಳಕ್ಕೆ ಎಸೆದು ಬಿಡುತ್ತಿದ್ದೆ. ನಾನು ಆ "ಸ್ನೇಹಿತ"ರೊಂದಿಗೆ ಮಾತನಾಡಲಿಲ್ಲ. ಮಾತನ್ನು ಪ್ರಾರಂಭಿಸಿದರೆ ಮಾತು ಹಿಡಿತದಲ್ಲಿರುವುದಿಲ್ಲವೆಂದು ನನಗೆ ಗೊತ್ತು, ಈ ಪಿಶಾಚಿ ತನಗೆ ಒಂದುದಿನ ಸಾವಕಾಶವಾದುದನ್ನು ಯೋಚಿಸುತ್ತಿದ್ದಾನೆಯೇ ಹೊರತು ನನಗೂ ಒಂದು ದಿನ ಸಾವಕಾಶವಾಗಿ ನನ್ನ ಕೆಲಸಗಳೆಲ್ಲಾ ಕೆಟ್ಟುದು ಇವನ ಗಮನಕ್ಕೆ ಬರಲಿಲ್ಲವಲ್ಲಾ ಎಂದುಕೊಂಡೆ. ನಾನು ಗಂಟನ್ನು ಅವನ ಮುಂದೆ ಎಸೆದು ಹೊರಟಕೂಡಲೇ ಆತ "ಮುಂದೆ ನೀವು ಎಲ್ಲಿಗೆ?" ಎಂದ. ಹಿಂದೆ ಅವನು ಎಲ್ಲಿಗೆ ಎಂದಾಗ ಅವನ ಪ್ರಶ್ನೆಗೆ ಪ್ರತ್ಯುತ್ತರವನ್ನು ಕೊಡುವ ಸೌಜನ್ಯವನ್ನು ತೋರಿಸಿದುದರಿಂದಲೇ ನನಗೆ ಈ ಗತಿಯುಂಟಾಗಿತ್ತು. ನಾನು 'ಎಲ್ಲಿಗಾದರೆ ನಿವಂಗೇನು ? ಯಮಪುರಿಗೆ' ಎಂದು ಹೇಳಿ ಒಂದು ಗಳಿಗೇನೂ ಆ ಜಾಗದಲ್ಲಿ ನಿಲ್ಲದೆ ಓಡಿದೆ.

ನೀವು ಹೊರಟಿರುವಾಗ ಯಾರಾದರೂ ಎಲ್ಲಿಗೆ ಎಂದರೆ, ಜೋಕೆ, ಜವಾಬ ಕೊಡಬೇಡಿ. ಈ ಪ್ರಶ್ನೆ ಕೇಳುವ ಈ ಪ್ರಾಣಿಯ ಉದ್ದೇಶವೇನು ಎಂದು ಚಿಂತಿಸಿ.

ಭಾವೋದ್ವೇಗ

ಭಾವೋದ್ವೇಗದಿಂದ
ಆತ್ಮೀಯ ಮಿತ್ರನಿಗೆ
ನೀ ಉಗುಳಿದರೂ
ನನಗೆ
ಖುಷಿಯೇ !
ಎಂದವನು
ಪಕ್ಕನೆ
ಚೇತರಿಸಿಕೊಂಡು
ಆದರೆ
ಉಗುಳಬ್ಯಾಡ !
ಎಂದ

—ಪುಷ್ಪಾನಂದ ಉಳ್ಳಾಲ್

ನಾಯಕನ ಹಾಡು

—ಕೆ. ಜಿ. ಸತೀಶ್

ಅಂದು

ವೆಂಗ್‌ಸರ್ಕಾರ್, ವೆಂಗ್‌ಸರ್ಕಾರ್ ರನ್ನು ಬೇಕೆ ?
ರನ್ನು ಬೇಕು, ವಿನ್ನು ಬೇಕು ಎಲ್ಲಬೇಕು.

ವೆಂಗ್‌ಸರ್ಕಾರ್ ನಿಂಗೆ ರನ್ನು ಏಕೆ ಬೇಕು ?
ಗೆದ್ದು ಕ್ಯಾಪ್ಟನ್ನಾಗಿ ಮುಂದುವರೆಯ ಬೇಕು.

ಕ್ಯಾಪ್ಟನ್ನಾಗಿ ಮುಂದುವರೆದರೇನು ಮಾಡುವೆ ?
Adನಲ್ಲಿ ಮಾಡೆಲ್ಲಾಗಿ ದುಡ್ಡು ಮಾಡುವೆ.

ಇಂದು

ವೆಂಗ್‌ಸರ್ಕಾರ್, ವೆಂಗ್‌ಸರ್ಕಾರ್ ಏನು ಬೇಕು ?
ಪೆನ್ನು ಬೇಡ, ಪೇಪರ್ ಬೇಡ ಎಲ್ಲ ಸಾಕು.

ವೆಂಗ್‌ಸರ್ಕಾರ್ ನೀನು ಪೆನ್ನನ್ನೇಕೆ ಒಲ್ಲೆ ?
ಬರಹದಿಂದ ಕಂಡುಕೊಂಡೆ ನನ್ನ ಎಲ್ಲೆ.

ಆರು ತಿಂಗಳವಧಿಯಲ್ಲಿ ಬರೆದು ನೋಡು ?
ಪೆನ್ನಿಗಿಂತ ರನ್ನೆ ಮೇಲು, ಸಾಕು ಪಾಡು.

ರವಿಕೆಗೆ ತಕ್ಕ ರಮಣಿ

—ಚಿತ್ರಾ ರಾಮು ಚಂದ್ರನ್

"ಸಾರ್......ಸಾರ್"

ಒರಗು ಕುರ್ಚಿಯಲ್ಲಿ ಕುಳಿತು ಪತ್ರಿಕೆಯಲ್ಲಿ ಮುಳುಗಿದ್ದ ವ್ಯಕ್ತಿ ತಲೆ ಎತ್ತಿದರು.

"ಸಾರ್. ನಾವು ಎದುರು ಮನೆಗೆ ಬಂದು ಹತ್ತು ದಿವಸಗಳಾಗಿವೆ. ದಿನಾಗಲೂ ನಿಮ್ಮ ಮನೆಯಿಂದ ತರುಣಿಯೊಬ್ಬರು ಕಾಲೇಜ್‌ಗೆ ಹೋಗುತ್ತಾರಲ್ಲ, ಆಕೆ ನಿಮ್ಮ ಮಗಳು ತಾನೆ ? ಸ್ವಲ್ಪ ದಪ್ಪ ತೋಳಿನ ತರುಣಿ. ನಮಗೆ ಬೇಕಾದಂತ ಪರ್ಫೆಕ್ಟ್ ಫಿಗರ್.........

ನನಗೆ ಗಾಭರಿಯಾಯಿತು. "ವೆಂಕಟೇಶ—— ಅಂತ ಮಧ್ಯೆ ಬಾಯಿ ಹಾಕಿದೆ. "ಸುಮ್ಮನಿರೋ, ನಮ್ಮ ಅವಸರ ನಿನಗೇನು ಗೊತ್ತು ಅನ್ನುವಷ್ಟರಲ್ಲಿ ಬಾಗಿಲ ಹಿಂದಿನಿಂದ ಇಣುಕುತ್ತಿದ್ದ ಮಹಿಳೆಯೊಬ್ಬರು ಸರಕ್ಕನೆ ಒಳಗೆ ಮರೆಯಾದರು.

ವೆಂಕಟೇಶ ಮುಂದುವರಿಸಿದ. "ಆಕೆ ನಿಮ್ಮ ಶ್ರೀಮತಿಯವರೇ ? ನಿಮ್ಮ ಮಗಳ ವೈ ಕಟ್ಟೇ ಇದ್ದರೆ ಅವರೇ ಆದರೂ ಸರಿ......

ಮೃಗಗಳ ಮುಖಗಳನ್ನು ಹೋಲುವ ಕೆಲವು ಮನುಷ್ಯರ ಚಿತ್ರಗಳನ್ನು ಯಾವುದೋ ಆರ್ಟ್ ಪುಸ್ತಕದಲ್ಲಿ ನೋಡಿದ್ದೆ. ಆದರೆ ನನ್ನ ಕಣ್ಣೆದುರಿನಲ್ಲೇ ಒಬ್ಬ ಸಾಧು ಮನುಷ್ಯನ ಸಾದಾ ಮುಖ, ಬುಲ್‌ಡಾಗ್‌ನ ಮುಖದಂತೆ ಬದಲಾಗುವ ಅದ್ಭುತವನ್ನು ಇಂದೇ ಕಂಡದ್ದು, ಅದರಲ್ಲೂ ರೇಗಿದ ಬುಲ್ ಡಾಗ್ ಮುಖ. ಆದರ ಕಂಠದಿಂದ ಹೊರಬಿದ್ದ ಘರ್ಜನೆಗೆ "ಪುಂಡ, ಲಫಂಗ, ದುರುಳ ಗೂಂಡ....... ಎಂಬ ಅರ್ಥಗಳೇ ಇರಬೇಕೆಂದು ಊಹಿಸಲು ನಾನು ಯಾವ 'ಅಮರ'ವನ್ನೂ ಬಾಯಿಪಾಠ ಮಾಡಬೇಕಿರಲಿಲ್ಲ. ಬುಲ್ಡಾಗಾವತಾರ ನಮ್ಮ ಮೇಲೆರಗಿ ನಿರ್ನಾಮ ಮಾಡುವ ಮುನ್ನ ನಾನು ವೆಂಕಟೇಶ ಮೂರ್ತಿಯನ್ನೂ ಎಳೆದುಕೊಂಡು ಅಲ್ಲಿಂದ ಪಾರಾಗಿದ್ದೆ.

ಸ್ವಾಮಿ, ಓದುಗ ಮಹಾಶಯರೇ, ನಮ್ಮನ್ನು ತಪ್ಪು ತಿಳಿಯಬೇಡಿ. ನಡೆದ ಸಂಗತಿ ಇಷ್ಟೆ.

ಅಂದು ಬೆಳಗ್ಗೆ ಎದ್ದಾಗ ನನ್ನ ಸಹಧರ್ಮಿಣಿ ನಿರ್ಮಲಳಿಗೆ ತಲೆ ಭಾರ.ಕೆಂಡಾ ಮಂಡಲ ಜ್ವರ.

"ಅಯ್ಯೋ ದೇವರೇ.........ಈಗೇನು ಮಾಡೋದು ?" ಅಂತ ನನ್ನ ಆಪ್ತ ಮಿತ್ರ ವೆಂಕಟೇಶ ಮೂರ್ತಿ ಮತ್ತು ಅವನ ಧರ್ಮಪತ್ನಿ ಸುಧಾ ಒಟ್ಟಿಗೇ ಉದ್ಗರಿಸಿದ್ದರು. ಅವರುಗಳ ವ್ಯಾಕುಲಕ್ಕೆ ಕಾರಣ, ಅವರ ಅಜ್ಜಿಯ ಕೆಲಸಕ್ಕೆ ಬರಬಹುದಾದ ಅಡ್ಡಿ, ಆತಂಕ, ಕುಂದು.

ವೆಂಕಟೇಶಮೂರ್ತಿಯ ಅಜ್ಜಿ ನಿಮ್ಮ, ನಮ್ಮ, ಅಜ್ಜಿಯರಂತಲ್ಲ. ಮಲ್ಲೇಶ್ವರದಲ್ಲಿ ಒಂದು ಸಂದಿನಲ್ಲಿ ಬಾಡಿಗೆ ಮನೆಯಲ್ಲಿದ್ದ ವೆಂಕಟೇಶ ಮೂರ್ತಿಗೆ, ಈ ಹೊಸ ಲೇಔಟಿನಲ್ಲಿ ಹೊಸ ಮನೆ ಕಟ್ಟಿಸಿ ಕೊಟ್ಟು ಈಚೆಗೆ ಗೃಹ ಪ್ರವೇಶ ಮಾಡಿಸಿದ್ದ ಶ್ರೀಮಂತ ಅಜ್ಜಿ

"ನನ್ನ ಈ ಶ್ರೀ ಚಕ್ರ ಪೂಜೆಯನ್ನು ನನ್ನ ನಂತರ ಯಾರು ಮಾಡ್ತಾರೋ ಏನೋ ಅದನ್ನ ಮಠಕ್ಕೆ ಕೊಡಬೇಕೆಂದಿದ್ದೇನೆ. ಅದರ ಪೂಜೆ ಖರ್ಚಿಗಾಗಿ ನನ್ನ ಹೆಸರಿನಲ್ಲಿರೋ ರೊಕ್ಕವನ್ನೂ ಮಠಕ್ಕೇ ಸೇರಿಸಿದರೆ ಹೇಗೆ ? ಅಜ್ಜಿಯ ಯೋಚನಾ ಲಹರಿ ಅಪಾಯಕರ ದಿಕ್ಕಿಗೆ ಹರಿಯುತ್ತಿತ್ತು.

"ಎಲ್ಲಾದರೂ ಉಂಟೆ ಅಜ್ಜೀ ! ಮನೆ ದೇವರನ್ನ ಮಠಕ್ಕೆ ಕೊಡುವುದೇ ! ಎಂದಿಗೂ ಇಲ್ಲ. ನಿಮ್ಮಂತೆಯೇ ನಾವೂ ಆ ಪೂಜೆ ಮುಂದುವರಿಸುತ್ತೇವೆ" ಎಂದು ಒಟ್ಟಿಗೇ ಆಣೆಯಿಟ್ಟಿದ್ದರು ದಂಪತಿಗಳು.

ಈ ಶುಕ್ರವಾರ ಶ್ರೀ ಚಕ್ರ ಪೂಜೆ. ಅಜ್ಜಿಯ ಚಿನ್ನದ ಚಕ್ರ, ರೊಕ್ಕ ಎರಡೂ ಕೈ ಜಾರಿ ಹೋಗದಂತೆ. ಗಂಡ ಹೆಂಡಿರಿಬ್ಬರೂ ತಮ್ಮ ಭಕ್ತಿ, ಶ್ರದ್ಧೆಗಳನ್ನು ಚೆನ್ನಾಗಿಯೇ ತೋರಿಸಿದರು. ಎಲ್ಲಾ ಏರ್ಪಾಟುಗಳೂ ಸಾಂಗವಾಗಿ ನಡೆದವು.

ಸುವಾಸಿನೀ ಪೂಜೆಯೂ ಏರ್ಪಾಟಾಗಿತ್ತು. ಐದು ಮುತ್ತೈದೆಯರನ್ನು ಆಹ್ವಾನಿಸಿದ್ದಾಗಿತ್ತು. ಐವರಿಗೂ ಸೀರೆಗಳು, ಅಂದೇ ತೊಡಲು ಅನುಕೂಲವಾಗುವಂತೆ, ಅಳತೆಗೆ ಸರಿಯಾಗಿ ಹೊಲಿಸಿಟ್ಟ ರವಿಕೆಗಳು ಎಲ್ಲಾ ತಯಾರು. ಐವರ

ಪೈಕಿ ನನ್ನ ಗೃಹಲಕ್ಷ್ಮಿಯೂ ಒಬ್ಬಳು. ಆದರೆ ಅವಳಿಗೆ ಜ್ವರ, "ಈ ಕೊನೇ ನಿಮಿಷದಲ್ಲಿ ಯಾವ ಮುತ್ತೈದೆ ಸಿಕ್ತಾಳಣ್ಣ ? ರವಿಕೆ ಬೇರೆ...... ಸುಧಾಳ ಪೇಚಾಟ ನನಗರ್ಥವಾಯಿತು.

ಬ್ರಹ್ಮ ದೇವನಿಗೆ, ನನ್ನ ನಿರ್ಮಲೆಯನ್ನು ಸೃಷ್ಟಿಸುವಾಗ,ಆಯಾಸವಾಗಿತ್ತೋ ಏನೋ ಸ್ವಲ್ಪ ಲೆಕ್ಕಚಾರ ತಪ್ಪಿದ್ದ. ಅವಳ ಪುಟ್ಟ ಮೈಕಟ್ಟಿಗೆ ಸ್ವಲ್ಪವೂ ಹೊಂದ ದಂತಹ ಭಾರೀ ತೋಳುಗಳು. ಅದಕ್ಕೆ ತಕ್ಕ ರವಿಕೆ ಈಗಾಗಲೇ ತಯಾರಾಗಿ ಕೂತಿದ್ದರಿಂದ, ಅದಕ್ಕೆ ತಕ್ಕ ಮುತ್ತೈದೆಯನ್ನು ಎಲ್ಲಿಂದ ತರೋದು ? ಈ ಪರಿ ಸ್ಥಿತಿಯಲ್ಲೇ ಮೊದಲು ವರ್ಣಿಸಿದ ಘಟನೆ ನಡೆದದ್ದು. "ಆ ಮನೆ ಹುಡುಗಿಯನ್ನು ಒಂದೆರಡು ಸಲ ನೋಡಿದ್ದೆ. ನಿರ್ಮಲಳ ಆಕಾರಾನೇ ಸುಮಾರಾಗಿ, ಕೇಳಿದ್ದೇನಂ ತಪ್ಪು ?" ವೆಂಕಟೇಶನಿಗೆ ತಾನೇನು ತಪ್ಪು ಮಾಡಿದ್ದೆ ಎಂಬುದರ ಅರಿವಾದಂತೆ ಕಾಣಲಿಲ್ಲ.

ಸೋತು ಸೊರಗಿ ಚಿಂತಿಸುತ್ತಾ ಮನೆ ಸೇರಿದಾಗ ಸುವಾಸಿನೀ ಪೂಜೆ ಮುಗಿದು ಹೋಗಿದ್ದು ಕಂಡು ಆಶ್ಚರ್ಯವಾಯಿತು.

"ನಿಮಗಿಂತ ದೊಡ್ಡ ಮುತ್ತೈದೆ ಬೇಕೇ ಹೇಳಿ ಅಜ್ಜಿ. ಸಾಕ್ಷಾತ್ ಶಾರದಾ ಪರಮೇಶ್ವರಿಯ ಹಾಗಿದ್ದೀರಿ. ನಿಮ್ಮ ಪೂಜೆ ಮಾಡಲೂ ಭಾಗ್ಯ ಇರಬೇಕಲ್ಲ"

ಸುಧಾ ಅಜ್ಜಿಯನ್ನು ಪುಸಲಾಯಿಸುತ್ತಿದ್ದಳು.

ಹಣೆಯ ತುಂಬ ಕುಂಕುಮ, ಕೆನ್ನೆಯ ತುಂಬ ಅರಿಶಿನ, ಬಾಯಿ ತುಂಬ ತಾಂಬೂಲ ಧರಿಸಿ,ಮೈ ತುಂಬ ಹೊಸ ಸೀರೆಯುಟ್ಟು,ತೋಳ ತುಂಬ...ಇಲ್ಲ ಇಲ್ಲ... ತೋಳಿಲ್ಲದ ರೇಷ್ಮೆ ರವಿಕೆ ತೊಟ್ಟು ಅಜ್ಜಿ ರಾರಾಜಿಸುತ್ತಿದ್ದಳು. ಹೌದು; ಬಿಸಿಲಿನಲ್ಲಿ ಬೇಯುತ್ತಿದ್ದ ತನ್ನ ಊರಿನಲ್ಲಿ ಅಜ್ಜಿ ಯಾವಾಗಲೂ ಮಲ್ಲಿನ ತೋಳಿಲ್ಲದ ರವಿಕೆ ಯನ್ನೇ ತೊಟ್ಟು ಅಭ್ಯಾಸ. ಸುಧಾ, ನನ್ನ ಸಹಧರ್ಮಿಣಿಗಾಗಿ ಹೊಲಿಸಿಟ್ಟಿದ್ದ ರವಿಕೆಯ ತೋಳುಗಳನ್ನು ಕತ್ತರಿಸಿ, ಅಜ್ಜಿಗೆ ತೊಡಿಸಿ, ಪೂಜೆಗೆ ಕೂರಿಸಿಬಿಟ್ಟಿದ್ದಳು.


"ಸುಧಾ, ನೀನು ತುಂಬ ಜಾಣೆ. ಅದ್ಸರಿ ಈ ತಿರುಕ ವೆಂಕಟೇಶ ಎಲ್ಲಿ ?" ಅಜ್ಜಿಯ ಪ್ರಶ್ನೆ.

ವೆಂಕಟೇಶನಿಗೆ ರೋಷ, ಕೋಪ, ದುಃಖ.

"ಊರವರ ಹತ್ತಿರ ಪೋಲಿ, ಪುಂಡ ಅನ್ನಿಸಿಕೊಂಡದ್ದು ಸಾಲದೂಂತ, ಇಲ್ಲಿ ಬಂದರೆ ತಿರುಕ ಎಂಬ ಬಿರುದು ! ಯಾರಿಗೆ ಬೇಕು ಈ ಆಸ್ತಿ.

ಅಜ್ಜಿ ಹೇಳಿದರು, "ಬಾರೋ ಹುಚ್ಚಪ್ಪ. ಪೂಜೆ ಸಮಯಕ್ಕೆ ಸರಿಯಾಗಿ ಎಲ್ಲಿ ಹೋಗಿಬಿಟ್ಟಿದ್ದೆ ? ನಿನ್ನನ್ನೂ, ನನ್ನ ಆಸ್ತಿಯನ್ನೂ ಇನ್ನು ನಿಭಾಯಿಸೋ ಭಾರ ಸುಧಾಗೆ ಸೇರಿದ್ದು. ಪತ್ರ ಎಲ್ಲಾ ಅವಳ ಹೆಸರಿಗೆ ಮಾಡ್ತೀನಿ. ಆಯಿತೇ"

"ಎಲ್ಲಾ ನಿಮ್ಮ ಆಶೀರ್ವಾದ ಅಜ್ಜೀ" ಅಂತ ವೆಂಕಟೇಶಮೂರ್ತಿ ಬೆಕ್ಕಿನಂತೆ ನುಡಿದದ್ದನ್ನು ಕೇಳಿ ನಾನು ಪೆಚ್ಚಾದೆ.



"ನೀವು ಯಾತಕ್ಕೂ ಪ್ರಯೋಜನ ಇಲ್ಲಾರೀ. ಅಲ್ಲಾ ನಮ್ಮ Phone ನ್ನ ಯಾರೂ ಕದ್ದು ಕೇಳೇ ಇಲ್ವಲ್ಲಾರಿ".

ಅಭಿವ್ಯಕ್ತಿ–ಪುಸ್ತಕ ಬಿಡುಗಡೆ

—ಶಿವು

ಆಗಸ್ಟ್ ಹದಿನೈದರಂದು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲಿನಲ್ಲಿ ಅಪೂರ್ವ ಘಟನೆಯೊಂದು ನಡೆಯಿತು. ಎರಡು ಕನ್ನಡ ಪುಸ್ತಕಗಳ ಬಿಡುಗಡೆ ಸಮಾರಂಭಕ್ಕೆ ಸುಮಾರು ನಾನ್ನೂರು ಜನ ಜಮಾಯಿಸಿದ್ದರು. ನನ್ನ ಇತ್ತೀಚಿನ ಅನುಭವದಲ್ಲಿ ಇಂತಹ ಜನಸ್ತೋಮವನ್ನು ಕಂಡದ್ದೇ ಇಲ್ಲ. "ಇದರ ಮರ್ಮ ಏನು ?" ಅಂತ ಲೇಖಕಿ ಭುವನೇಶ್ವರಿಯವರನ್ನು ಕೇಳಿದೆ. ಅವರು ಕಾರಿಡಾರಿನ ಕಡೆ ಬೊಟ್ಟು ಮಾಡಿದರು. ಕಾರಿಡಾರಿನ ಕೊನೆಯಲ್ಲಿ ಬಂದವರಿಗೆಲ್ಲಾ ಅಲ್ಪಾಹಾರ, ಕಾಫಿ ಸರಬರಾಜಾಗುತ್ತಿತ್ತು.

ಐದೂವರೆಗೆ ಪ್ರಾರಂಭವಾಗಬೇಕಾಗಿದ್ದ ಸಮಾರಂಭ, ಅವಸರವಿಲ್ಲದೇ ಆರೂವರೆಗೆ ಶುರುವಾಯಿತು. ಅಂದು ಬಿಡುಗಡೆಯಾದ ಪುಸ್ತಕಗಳೆಂದರೆ, ನಾಗತಿ ಹಳ್ಳಿ ಚಂದ್ರಶೇಖರ್ ಅವರ "ಚುಕ್ಕಿ ಚಂದ್ರಮರ ನಾಡಿನಲ್ಲಿ" ಮತ್ತು ಅಪರಂಜಿ ಬಳಗದ ಭುವನೇಶ್ವರಿ ಹೆಗಡೆಯವರ "ನಕ್ಕು ಹಗುರಾಗಿ" ಸಭೆಯ ಶುರುವಿನಲ್ಲಿ ಸಭಿಕರನ್ನು ಬರಮಾಡಿಕೊಳ್ಳುತ್ತಾ ಹೆಣ್ಣುಮಗಳೊಬ್ಬಳು "ಹೆಚ್ಚು ಮಾತನಾಡಿದರೆ ಚಂದ್ರಣ್ಣ ತಲೆ ಒಡೆಯುತ್ತಾನೆ" ಎಂದು ಹೇಳಿದ್ದರಿಂದ, ಮುಂದಿನ ಭಾಷಣಕಾರರಿಗೆಲ್ಲಾ ಒಂದು ಒಳ್ಳೇ Cue ದೊರೆತಂತಾಯಿತು.

ಡಾ॥ ಅಶೋಕ ಪೈ ಅವರಿಂದ ಪುಸ್ತಕಗಳ ಬಿಡುಗಡೆಯ ನಂತರ ನಾ. ಡಿಸೋಜರವರಿಂದ ನಾಗತಿ ಹಳ್ಳಿಯವರ ಪುಸ್ತಕದ ಬಗ್ಗೆ ನಾಲ್ಕು ಮಾತುಗಳು. ಕಾದಂಬರಿಯ ಪೂರ್ಣ ಪರಿಚಯವನ್ನು ಡಿಸೋಜಾರವರು ನೀಡುತ್ತಿದ್ದಾಗ ಪುಸ್ತಕವನ್ನು ಸಿನಿಮಾ ರೂಪದಲ್ಲಿ ನೋಡುತ್ತಿದ್ದಂತೆ ಭಾಸವಾಯಿತು. ಕಾದಂಬರಿಯ ಪೂರ್ಣ ಪರಿಚಯಂ ನೀಡಿದ ಮೇಲೆ. ಭಾಷಣಕಾರರು, ಕಥೆಯಲ್ಲಿನ ಅಸಂಭವ ಸನ್ನಿವೇಶಗಳು. ಹಲವು ಪಾತ್ರಗಳ ಅಸಹಜ ಮಾತುಗಾರಿಕೆ, ಇತರ ಹುಳುಕುಗಳ ಬಗ್ಗೆ ಅತಿ ವಿವರವಾಗಿ ಮಾಹಿತಿ ನೀಡಿದ್ದು, ತಿಂದ ತಿಂಡಿಗೆ ಅಪಚಾರವಾಯಿತೇನೋ ಅನ್ನಿಸಿತು.

ಅ.ರಾ. ಮಿತ್ರರವರು ಭಾಷಣ ಪ್ರಾರಂಭಿಸುವ ಹೊತ್ತಿಗಾಗಲೇ ಏಳೂ ಮುಕ್ಕಾಲು. ಭಾಷಣ ಪ್ರಾರಂಭದಲ್ಲೇ ಅವರು "ಈಗಾಗಲೇ ಹೊತ್ತು ಮೀರಿದೆ. ನಾನೂ ಉದ್ದವಾದ ಭಾಷಣ ಮಾಡಿ ನೀವೆಲ್ಲಾ ಬಸ್ಸು ಸಿಗದೇ ಚುಕ್ಕಿ ಚಂದ್ರಮರ ನಾಡಿನಲ್ಲಿ ಓಡಾಡುವಂತಾಗದಿರಲಿ" ಎಂದು ಶುರು ಹಚ್ಚಿ ತಮ್ಮ ಟ್ರೇಡ್ ಮಾರ್ಕ್ ಜೋಕುಗಳಿಂದ ಅಮಾಯಕ ಸಭಿಕರನ್ನು ನಗಿಸಿದರು. ಕೊನೆಯದಾಗಿ ಜೆ.ಬಿ. ರಂಗಸ್ವಾಮಿಯವರ ಭಾಷಣ. ಅವರನ್ನು ಜೇಬರ್ ಎಂದು ಕರೆಯುತ್ತಾರಂತೆ. ಅವರ ಮಾತುಕತೆ ಪ್ರಾಮಾಣಿಕವಾಗಿತ್ತು. "ನಕ್ಕು ಹಗುರಾಗಿ" ಪುಸ್ತಕವನ್ನು ಓದದೇ ಚೆನ್ನಾಗಿದೆ ಎಂದು ಇವರು ತೀರ್ಮಾನಿಸಿದರಂತೆ, ಏಕೆ ಎಂದು ಕೇಳಿದ್ದಕ್ಕೆ ಅವರ ಉತ್ತರ "ಈ ಪುಸ್ತಕದಲ್ಲಿ ಆಶ್ಚರ್ಯಸೂಚಕ ಚಿಹ್ನೆಗಳಿಲ್ಲ. ಆದ್ದರಿಂದ ನಿಜವಾದ ಹಾಸ್ಯ ಇರಲೇಬೇಕು"

ಒಟ್ಟಿನಲ್ಲಿ ತಿಂದ ತಿಂಡಿ ಅರಗುವಷ್ಟು ಭಾಷಣ ಕೇಳಿ ಎದ್ದು ಬಂದೆವು.

ನೋಟು ಉಗ್ಸಿಕೊಂಡಿತು !

—ಜಿ. ರಾಮಣ್ಣ ಆಲೆಟ್ಟಿ

ಬೆಂಗಳೂರು ಕಬ್ಬನ್ ಪಾರ್ಕ್ ಲೈಬ್ರರಿಯೊಳಗೆ ಕುಳಿತು ತಲೆ ಭಾರವಾದುದರಿಂದ ಎದ್ದು ಹೊರಬಂದು ಆಕಾಶವಾಣಿ ಕೇಂದ್ರಕ್ಕೆ ಹೋಗೋಣವೆಂದು ತಲೆ ತಗ್ಗಿಸಿ ನಡೆಯುತ್ತಿದ್ದೆ. "ಸ್ವಾಮಿೊ, ಧನೀ" ಮಗುವನ್ನು ಕಂಕುಳಲ್ಲಿ ಇಟ್ಟುಕೊಂಡ ಹೆಂಗಸೊಬ್ಬಳು ಕರೆದಳು. ತಲೆ ಎತ್ತಿದೆ. "ಶಾಸ್ತ್ರ ಹೇಳ್ತೀನಿ, ಒಳ್ಳೇ ಕಾಲ ಬರ್‍ತೈತೆ" ಎಂದು ಕವಡೆ ಪಾತ್ರೆ ಒಡ್ಡಿದಳು. "ಬೇಡ ಬಿಡಮ್ಮ ಎಂದು ಮುಂದೆ ಹೆಜ್ಜೆ ಹಾಕಿದೆ. "ಅಯ್ನೋರ, ಮಗೂಗೆ ಹಾಲಿಗೆ ಏನಾದರೂ ಕೊಡಿ" ಎಂದಳು. ಎದೆ 'ಡಸಕ್' ಎಂದಿತು. "ಮಕ್ಕಳಿಗೂ ದೇವರಿಗೂ ಭೇದವಿಲ್ಲ. ಇಬ್ಬರಾ ಮನದಲ್ಲೂ ಕಪಟವಿಲ್ಲಾ............ ಸಿನಿಮಾ ಹಾಡು ನೆನಪಾಯಿತು. ಬ್ಯಾಗಿನಿಂದ ಐದು ರೂಪಾಯಿ ನೋಟು ತೆಗೆದು "ಚಿಲ್ಲರೆ ಇದೆಯೇನಮ್ಮಾ ? ಎಂದಾಗ 'ಕೊಡಿ ಸ್ವಾಮಿ' ಎಂದು ನೋಟು ಕೈಗೆತ್ತಿಕೊಂಡಳು. ತನ್ನ ಚೀಲದಿಂದ ಅದೇನೋ ಕುಂಕುಮ ಹಚ್ಚಿ "ಹಣ ದೊಡ್ಡಲ್ಲ ಸ್ವಾಮಿೊ, ಗುಣ ಗುಣಾ" ಎಂದು ಏನೇನೋ 'ಶಾಸ್ತ್ರ ಹೇಳತೊಡಗಿದಳು.

"ಒಂದು ರೂಪಾಯಿ ತಗೊಂಡು ನಾಲ್ಕು ರೂಪಾಯಿ ಕೊಡಮ್ಮ. ನಾನು ಅರ್ಜಂಟಾಗಿ ಹೋಗಬೇಕಾಗಿದೆ" ಎಂದು ಅವಸರ ಮಾಡಿದೆ. ನೋಟಿನ ಮೇಲೆ "ಥೂ" ಅಂತ ಉಗಿದಳು ! "ನನ್ನಲ್ಲಿ ಉಗ್ಸಿಕೊಂಡ ಈ ಹಾಳು ರೂಪಾಯಿ ಯಾಕ್ಬುದ್ದೀ ?" ಎಂದು ಕೇಳಿದಳು.

ರಸ್ತೆಯ ಇನ್ನೊಂದು ಬದಿಯಲ್ಲಿ ನಮ್ಮಿಬ್ಬರನ್ನು ನೋಡಿ ನಗುತ್ತಾ ಶಾಲಾ ಹುಡುಗರ ಗುಂಪು ಹೋಗುವುದನ್ನು ನೋಡಿ ಮೈ ಬೆವರತೊಡಗಿತು. ದೂರದಲ್ಲಿ ಇನ್ನೊಂದು ಗುಂಪು ಬರ್‍ತಿತ್ತು.

ನಾನು ಆಕೆಯೊಡನೆ ಮರು ಮಾತನಾಡದೆ ಸೀದಾ ಹೋಗಿ ಕೆ. ಜಿ. ಐ. ಡಿ. ಕ್ಯಾಂಟೀನ್‌ನಲ್ಲಿ ಒಂದು ಗ್ಲಾಸು ನೀರು ಕುಡಿದು ಬೆಳಿಗ್ಗೆ ಎದ್ದ ತಕ್ಷಣ ನನ್ನಾಕೆಯ ಮುಖ ನೋಡಿದ್ದಕ್ಕೆ ಆಕೆಯನ್ನು ಮನದಲ್ಲಿ ಹಳಿಯುತ್ತಾ ಬೆವರು ಒರೆಸಿಕೊಂಡೆ!

ಜಾನಪದ ಗಾದೆಗಳಲ್ಲಿ ಹಾಸ್ಯ

(ಸಂಗ್ರಹ) —ಕೃ. ನಾರಾಯಣ ರಾವ್

ಅತ್ತೆ ಸತ್ತು ಆರು ತಿಂಗಳಾದ ಮೇಲೆ ಸೊಸೆ ಕಣ್ಣಲ್ಲಿ ನೀರು ಬಂತು.

O O O

ಉದ್ದನ್ನಾಕಿ ಗಂಡ ಸಂತ್ಯಾಗ ಅಳತಿದ್ನಂತ ,
ಗಿಡ್ಡನ್ನಾಕಿ ಗಂಡ ಹೊಳ್ಯಾಗ ಅಳತಿದ್ನಂತ

O O O

ಕಸಗೂಂಡು ಹೋದ್ರ ಕಿಸಗೊಂಡ ಕುಂತರಂತ

O O O

ಕಳು ಮಾಡಾಕೆ ಹೋಗಿ ಕೆಮ್ಮಿದ ಹಾಂಗಾತು

O O O

ಕುಂಟರಿಗೆ ಮನಿ ಸಾರಸಾಕ ಹಚ್ಚಿ ಎಂಟು ಮಂದಿ ಎತ್ತಿ ಹಿಡಿದ್ರಂತ

O O O

ಪೋರಿಕಟಗೂಂಡ್ ಬ್ಯಾರೆ ಆಗ್ಬೇಡ,ಹೋರಿ ಕಟ್‌ಗೊಂಡ್ ಹೊಲ ಮಾಡ್ಬೇಡ

O O O

ಹೇಡಿ ಬೆನ್ನ ಕಟ್ಟಬಾರ್ದು, ಹೇಸಿ ನಿಬ್ಬಣಕ ಹೋಗಬಾರ್ದು

O O O

ಹೊರಕಡಿಕೆ ಹೋದಲ್ಲೇ ತಂಬಿಗೆ ಮರೆತು ಬರಾಂವ

O O O

ಗಂಡನೂ ಹೊಡೆದ ಸೋಮವಾರ ಒಪ್ಪತ್ತು

O O O

ಕೆಂಪು ಮೀಸೆಯವನ್ನ ಕೊತ್ತಿಗಣ್ಣಿನವನ್ನ ನಂಬಬ್ಯಾಡ

O O O

ಬಿಟ್ಟಿ ಹೆಣ್ಣು ಸಿಕ್ಕರ ನನಗೊಂದು, ನಮ್ಮಪ್ಪಗೊಂದು.
ರೊಕ್ಕ ಕೊಡೋದಾದ್ರೆ ನಾ ಸಂಣವ, ನಮ್ಮಯ್ಯ ಮುದ್ಕ

O O O

ಮಾರಮ್ಮಗ ಗಂಡನಿಲ್ಲ, ಬೀರೇ ದೇವರಿಗೆ ಯೆಂಡ್ತಿ ಇಲ್ಲ.

ಮೂರ್ಖತನ

ಕಣ್ಣು
ಮುಚ್ಚಿಕೊಂಡು
ಜಗವೆಲ್ಲಾ
ಕತ್ತಲೆ ! ಅಂತ
ಕೊರಗುವುದರಲ್ಲಿ
ಅರ್ಥವೆಲ್ಲಿ ?

—ಪುಷ್ಪಾನಂದ ಉಳ್ಳಾಲ್

ನೀರಿನಲ್ಲಿ ಹೋಮ

—ಸೇವ ನಮಿರಾಜ ಮಲ್ಲ

"ಪ್ರಿಯ ಪ್ರೊ॥ ಡಾ॥ ರಾಮ ಶ್ರೀವಾತ್ಸವ ಇಂದೋರ್ ಇವರಿಗೆ—

ವಿಷಯ ಭಾರತೀಯ ಬಾಹ್ಯಾಕಾಶ ಯಾನ ಸಂಸ್ಥೆ.

ಉಲ್ಲೇಖ ಆಕಾಶ ಬಾಣ (ಎಸ್ ಎಲ್ ವಿ) ಉಡ್ಡಾಣದ ಕುರಿತು ನಿಮ್ಮ ಆಕ್ಷೇಪಗಳು.

ಮೊನ್ನೆ ಶ್ರೀಹರಿಕೋಟದಿಂದ ನಾವು, ಅಂದರೆ ನಮ್ಮ ಸಂಸ್ಥೆ ಹಾರಿಸಿ ಬಿಟ್ಟ ಆಕಾಶ ಬಾಣದ ಕುರಿತು ನೀವು ಮಾಡಿರುವ ಟೀಕೆಯನ್ನು ನನ್ನ ಗಮನಕ್ಕೆ ತರಲಾಗಿದೆ.

ಆ ಬಾಣವನ್ನು ಹಾರಿಸಿ ಬಿಡುವ ನೆಲೆಯನ್ನು ಶ್ರೀಹರಿಕೋಟದಲ್ಲಿ ನಿರ್ಮಿಸಿದುದನ್ನೇ ನೀವು ಖಂಡಿಸಿರುವಿರಿ. ಬಹುಶಃ ನನ್ನ ಅಡ್ಡ ಹೆಸರು 'ರಾವ್' ಎಂದಿದ್ದುದರಿಂದ ನಾನೂ ಆಂಧ್ರ ಪ್ರದೇಶದವನೆಂದು ನೀವು ತಿಳಿದುಕೊಂಡಿರ ಬೇಕು. ಇಲ್ಲವಾದರೆ ತಮಿಳುನಾಡಿನ ಗಡಿಯಿಂದ ಸ್ವಲ್ಪ ದೂರವಿರುವ ಈ ನೆಲೆಯು ಆಕಾಶಬಾಣ ಹಾಸಿರಿ ಬಿಡಲು ಯೋಗ್ಯವಾದ ಊರಲ್ಲ ಎಂದು ನೀವು ವಾದಿಸುತ್ತಿರ ಲಿಲ್ಲ. ನನ್ನ ಹೆಸರಿನ ಆಂಧ್ರದ ಮುಖ್ಯ ಮಂತ್ರಿ ಎನ್. ಟಿ. ರಾಮರಾಯರೊಡನೆ ನಾನು ಸಾಮಿಲಾಗಿ ಅವರ ಪ್ರತಿಷ್ಠೆಯನ್ನು ಹೆಚ್ಚಿಸುವುದಕ್ಕೋಸ್ಕರ ಈ ಜಾಗೆ ಯನ್ನು ಆರಿಸಿದೆ ಎಂಬ ಕುಹಕದ ಊಹನೆಗೆ ಇಂಬು ಕೊಡುವಂತೆ ನೀವು ಹೇಳಿಕೆ ನೀಡಿದ್ದೀರಿ. ಶ್ರೀಹರಿಯ ಹೆಸರಿರುವ ಈ ಜಾಗವನ್ನು ಆರಿಸಿದುದರಿಂದ ನಾನು ಸ್ವತಃ ಶೈವನಾಗಿರಬೇಕೆಂದೂ ನಿಮ್ಮ ಕಲ್ಪನೆಯಿರಬಹುದು.

ಆದರೆ ನಿಜ ಹೇಳಬೇಕಾದರೆ ನನಗೂ ಬಂಗಾಲ ಕೊಲ್ಲಿಗೂ ಯಾವ ಸಂಬಂಧವೂ ಇಲ್ಲ. ನಾನು ಅರಬಿ ಸಮುದ್ರದ ಕರಾವಳಿಯವನು. ನನ್ನ ಊರು ಪ್ರಸಿದ್ಧವಾದ ಶ್ರೀ ಕೃಷ್ಣ ಮಠವಿರುವ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ. ಹಾಗೆ ನೋಡ ಹೋದರೆ ಕರ್ನಾಟಕದ ಮುಖ್ಯ ಮಂತ್ರಿಗಳೂ ರಾಮ ಎಂಬ ಹೆಸ ರಿನವರೇ ಆಗಿದ್ದರು. ಆದ್ದರಿಂದ ನಾನು ಕೇವಲ ನನ್ನ ಹೆಸರಿಗಾಗಿ ಹೀಗೆ

ಅಯೋಗ್ಯವಾದ ಜಾಗದಲ್ಲಿ ಎರಡನೆ ಬಾರಿಯೂ ಎಲ್ ಎಸ್ ವಿ ಬಾಣವನ್ನು ನೀರಿನಲ್ಲಿ ಹೋಮ ಮಾಡಿದೆ ಎನ್ನುವ ಆಪಾದನೆ ಸತ್ಯ ದೂರ.

ನೀವು ಶ್ರೀಹರಿಕೋಟದ ಗುರುತ್ವಾಕರ್ಷಣೆ ಕುರಿತು ಸಂಶಯ ವ್ಯಕ್ತಪಡಿಸಿದ್ದೀರಿ. ಈ ವಿಚಾರ ನ್ಯೂಟನನಷ್ಟೇ ಪಳೆಯದು. ಆಕಾಶ ಬಾಣವೆಂದರೆ ಮೇಲಿನಿಂದ ಕೆಳಗೆ ಧೊಪ್ಪನೆ ಬೀಳುವ ನ್ಯೂಟನನ ಸೇಬುಹಣ್ಣು ಅಲ್ಲ. ಗುರುತ್ವಾಕರ್ಷಣೆಯನ್ನು ಭೇದಿಸಿ ವಿಮಾನ ಹಾರುತ್ತದೆ. ರಾಕೆಟ್ ಹಾರುತ್ತದೆ, ಕೃತಕ ಉಪಗ್ರಹಗಳು ಆಕಾಶದಲ್ಲಿ ಸಂಚರಿಸುತ್ತಿವೆ. ಹೀಗಿರುವಾಗ ಶ್ರೀ ಹರಿಕೋಟದ ಗುರುತ್ವಾಕರ್ಷಣೆಯ ಶಕ್ತಿಯನ್ನು ನಾವು ತುಲನೆ ಮಾಡದೆ, ಅದಕ್ಕಿಂತ ಕಡಿಮೆ ಶಕ್ತಿಯ ಮೋಟಾರುಗಳನ್ನು ಉಪಯೋಗಿಸಿದುದೇ ಈ ಎರಡು ಎ ಎಸ್ ಎಲ್ವಿಗಳ ಪತನಕ್ಕೂ ಕಾರಣವೆನ್ನುವುದನ್ನು ಯಾರೂ ಒಪ್ಪತಕ್ಕದ್ದಲ್ಲ.

ಆಕಾಶ ಬಾಣಗಳ ಪರಿಚಯ ನನಗೆ ಬಾಲ್ಯದಿಂದಲೇ ಇದೆ. ಉಡುಪಿಯ ಶ್ರೀ ಕೃಷ್ಣ ಮಠದ ರಥ ಬೀದಿಯಲ್ಲಿ ಉತ್ಸವಗಳ ವೇಳೆ ಹಾರಿಸದ ಬಾಣ ಬಿರುಸುಗಳಿಲ್ಲ. ನಾನು ಕೂಡಾ ಆಗ ಪಟಾಕಿ, ನಕ್ಷತ್ರ ಕಡ್ಡಿ, ಸುದರ್ಶನ ಚಕ್ರ ಇತ್ಯಾದಿಗಳನ್ನು ಹಾರಿಸಿ ಬಿಟ್ಟು ಗುರುತ್ವಾಕರ್ಷಣ ಶಕ್ತಿಯನ್ನು ಅಭ್ಯಾಸಿಸಿದವ. ಬಾಣ ಬಿರುಸುಗಳನ್ನು ಹಾರಿಸುವ ತಜ್ಞರ ಕಾರ್ಯಾಚರಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದವ. ಅಲ್ಲದೆ ಅಪರೂಪದಲ್ಲಿ ಉರಿಯದೆ ಬಿದ್ದ ಆಕಾಶ ಬಾಣಗಳನ್ನು ಹೆಕ್ಕಿ, ಪುನಃ ಉರಿಸಿ ಅವುಗಳನ್ನು ಹಾರಿಸಿದವ. ಆಕಾಶ ಬಾಣಗಳ ಕುರಿತು ಬಾನುಲಿ ಮತ್ತು ದೂರದರ್ಶನಗಳನ್ನು ನಾನು ನಿರಂತರ ನೀಡಲು ಬಾಲ್ಯತನದಲ್ಲಿ ಬೆಳೆಸಿಕೊಂಡ ನನ್ನ ಅನುಭವವೇ ಆಧಾರವೆಂದರೂ ಸರಿ. ಇದೇ ಅನುಭವದ ಬಲದಿಂದಲೇ ನಾನು ಹಲವು ಬಾರಿ ಅಮೆರಿಕ, ಆಫ್ರಿಕ ಮತ್ತು ರಷ್ಯಾಗಳಿಗೆ ನಮ್ಮ ಇಲಾಖೆಯ ವತಿಯಿಂದ ಹಾರಿ ಬಂದಿದ್ದೇನೆ.

ಉಡುಪಿಯ ಭೂಮಿಯ ಪದರಿಗಿಂತ ಶ್ರೀಹರಿಕೋಟದ ಭೂಮಿಯ ಪದರು ಭಿನ್ನವಾದುದು ಎಂದು ನೀವು ಹೇಳಿದ್ದೀರಿ. ನಿಜ ಹೇಳಬೇಕಾದರೆ ನಾವು ಈ ಬಗ್ಗೆ ಸಂಶೋಧನೆ ನಡೆಸಿಲ್ಲ. 1976ರ ನಂತರವಂತೂ ಈ ಬಗ್ಗೆ ಸಂಶೋಧನೆಯೇ ಮುಂದುವರಿದಿಲ್ಲ. ಆದರೆ ಈ ಜಾಗವನ್ನು ನಾವು ಉಡಾವಣೆ ಆರಿಸುವಾಗ ಸಂಬಂಧಪಟ್ಟ ಪರಿಮಿತಿಗಳನ್ನು ಎಂದರೆ relevant parametersಗಳನ್ನು ಅವಲೋಕಿಸಿದ್ದೆವು. ನಮ್ಮ ಇಲಾಖೆಯ ಮುಖ್ಯಸ್ಥ ವಿಕ್ರಮ ಸಾರಾಭಾಯಿಯವರ ಕುಟುಂಬದ ಮೃದುಲಾ ಸಾರಾಭಾಯಿಯಿಂದ ಭರತ ನಾಟ್ಯ ಮತ್ತು ಕಥಕ್ ನೃತ್ಯಗಳನ್ನು ಅಲ್ಲಿ ಬರೀ ನೆಲದ ಮೇಲೆ ಮಾಡಿಸಿ ಮಣ್ಣಿನ ಪದರಿನ ಲಕ್ಷಣ ಮತ್ತು ಗುರುತ್ವಾಕರ್ಷಣೆ ಶಕ್ತಿಯ ಮಾಪನಗಳನ್ನು ಮಾಡಿಕೊಂಡಿದ್ದೆವು.

ಹೀಗಿರುವಾಗ ನಾನು ಮತ್ತು ನನ್ನ ಸಂಸ್ಥೆ ದೇಶಕ್ಕೇ ಮೋಸ ಮಾಡಿದೆ ಎಂದು ನೀವು ಆಪಾದಿಸಿರುವುದು ಖಂಡನೀಯ. ನಮ್ಮ ಸಂಸ್ಥೆಯಲ್ಲಿ ನನ್ನ ದುಷ್ಟ ಕೂಟವು ಅನೇಕ ಪ್ರತಿಭಾವಂತ ವಿಜ್ಞಾನಿಗಳನ್ನು ಹೊರದಬ್ಬಿದೆ ಎನ್ನುವುದೂ ಸತ್ಯವಲ್ಲ.

ನಾನು ನನ್ನ ಪ್ರತಿಭೆಯ ಕುರಿತು ಒಂದು ಗುಟ್ಟು ಹೇಳಬೇಕಿದ್ದರೆ ಇಂಥ ಆಕಾಶ ಬಾಣ ನೆಲೆಗಳನ್ನು ಸ್ಥಾಪಿಸಲು ಗ್ರೀನ್‌ಲೇಂಡ್, ಐಸ್‌ಲೇಂಡ್, ಫಾಕ್ ಲೇಂಡ್ ಮುಂತಾದ ಹಲವು ಪರದೇಶಗಳಿಂದ ನನಗೆ ಕರೆ ಬಂದಿದೆ.

ನಮ್ಮ ಉಡುಪಿ ನಗರ ಸಭೆಯು ನನಗೆ ಕೆಲವು ವರ್ಷಗಳ ಹಿಂದೆ ತಮ್ಮೂ ರಿನ ಹುಡುಗ ಎಂದು ಹೆಮ್ಮೆಯಿಂದ ನೀಡಿದ್ದ ಮಾನಪತ್ರದ ಫೋಟೋ ಪ್ರತಿ ಇವಕ್ಕೆ ಅಂಟಿಸಿದ್ದೇನೆ. ಈಗಲಾದರೂ ನನ್ನ ಮೇಲೆ ನಿಮಗಿರುವ ಹರಿ, ರಾಮ, ಬಂಗಾಲ ಕೊಲ್ಲಿ ಮುಂತಾದ ಸಂಶಯಗಳು ನಿವಾರಣೆಯಾಗಬಲ್ಲುವಲ್ಲ ?

ಇಂತಿ

ಪ್ರೊಫೆಸರ್ ಯು. ಆರ್. ನಾಟ್ ರಾವ್

೧. ಈ ಕುರಿತು ನಾನು ಈಗಾಗಲೇ ಪತ್ರಿಕಾಗೋಷ್ಠಿಯನ್ನು ಕರೆದು ವಿವರವಾದ ಹೇಳಿಕೆ ನೀಡಿ ನನ್ನ ಫೋಟೋಗಳನ್ನೂ ಕೊಟ್ಟಿದ್ದೇನೆ. ಆಕಾಶವಾಣಿ ಮತ್ತು ದೂರದರ್ಶನಗಳು ನನ್ನ ಈ ಕುರಿತಾದ ಸಂದರ್ಶನಗಳನ್ನು ರೆಕಾರ್ಡ್ ಮಾಡಿಕೊಂಡಿವೆ.

೨. ಎ ಎಸ್ ಎಲ್ವಿಯನ್ನು ನಾವು ಅಮಾವಾಸ್ಯೆಯ ದಿನ ಹಾರಿಬಿಟ್ಟುದು ಶಾಸ್ತ್ರಕ್ಕೆ ವಿರುದ್ಧವಾಯಿತು ಎಂದು ಜ್ಯೋತಿಷಿಯೊಬ್ಬರು ಹೇಳಿರುವುದನ್ನು ನಾನು ಅಲ್ಲಗಳೆಯಲಾರೆ.

ಪವಿತ್ರ ಚುನಾವಣಾ ಪುರಾಣವು

—ಬಿ. ಮಾಲಿನಿ ಮಲ್ಯ

ಪವಿತ್ರ ಭಾರತ ಭೂಮಿಯ ಮೇಲೆ ಆಗಾಗ ಬೀಸುತ್ತಿರುವ ಚುನಾವಣಾ ಚಂಡಮಾರುತದ ಮಹಾತ್ಮೆಯನ್ನು ಅರಿಯಂದವರುಂಟೆ ! ಭರತ ಖಂಡದ ಅಂಗ ಭಾಗವಾಗಿರುವ ನಮ್ಮೂರಿಗೂ ಅದು ಬೀಸದೆ ಇರಲು ಸಾಧ್ಯವೆ ? ನಮ್ಮೂರು ಅಂದರೆ ಗೊತ್ತಾಗಲಿಲ್ಲವೆ ? "ಧರಣಿ ಮಂಡಲದೊಳು ಜನವಡೆದ ಭರತ ಖಂಡದ ಮಧ್ಯದೊಳು ಶೋಭಿಸುತಿರ್ಪ ಪೆಸರ್ವಡೆದ ಪಳ್ಳಿ"- ಹಾವಿನ ಪಳ್ಳಿಯೇ ನಮ್ಮೂರು. ಹಾವಿನ ಹಳ್ಳಿಯೆಂದಾಕ್ಷಣ "ಇದೇನಿದು, ಹಾವುಗಳು ಬಿಡಾರ ಮಾಡಿಕೊಂಡಿರುವ ಹಳ್ಳಿಯೇ ?" ಎಂದು ತಲೆಕೆರೆದುಕೊಳ್ಳಬೇಕಾಗಿಲ್ಲ. ಹಾವಿನ ಹಳ್ಳಿಗೂ ಇತಿಹಾಸವಿದೆ; ಕತೆಯಿದೆ. ಬರಿಯ ಕಗ್ಗಳ್ಳಿಯಿರಬಹುದೆಂಬ ಶಂಕೆಯೂ ಬೇಡ. ಹಾವಿನ ಹಳ್ಳಿಯ ನಾಮೇತಿಹಾಸವನ್ನಾಗಲೀ, ಸ್ಥಳ ಪುರಾಣವನ್ನಾಗಲೀ ಬಣ್ಣಿಸಲು ಈಗ ನನಗೆ ಪುರುಸೊತ್ತಿಲ್ಲ. ಅದೊಂದು ಹಳ್ಳಿ ಎಂದಿಷ್ಟೇ ತಿಳಿದು ಕೊಂಡರೆ ತತ್ಕಾಲಕ್ಕೆ ಸಾಕು. ಭಾರತ ಮಾತೆಯ ಬೆನ್ನೆಲುಬೇ ಹಳ್ಳಿ—ಎನ್ನುವ ಸತ್ಯವನ್ನು ಮಾತ್ರ ಮರೆಯದಿರಿ. ಬಡತನ, ಅನಕ್ಷರತೆಗಳೇ ರೂಪ ತಾಳಿ, ಚಲಿಸುವ ಜಂಗಮಕೋಶದಂತಿರುವ ಬಡ ಜನರು, ಪಟ್ಟಣದ ಹಾಳು ಬದುಕಿಗೆ ಬಲಿ ಬೀಳದೆ ಹಠ ಹಿಡಿದು, ಹಳ್ಳಿಗಳಲ್ಲಿಯೇ ಉಸಿರು ಬಿಡುತ್ತಿರುವುದರಿಂದಲ್ಲವೇ ಇಂದು ಭಾರತಾಂಬೆಯ ನಾಡಿ ಮಿಡಿಯುತ್ತಿರುವುದು ?

ಸ್ವತಂತ್ರ ಭಾರತ ದೇಶದಲ್ಲಿ ಮೊನ್ನೆ ತಾನೇ ಬೀಸಿದ ಚುನಾವಣಾ ಮಲಯ ಮಾರುತ ಹಾವಿನ ಹಳ್ಳಿಗೆ ಅದೆಂಥ ತಂಪನ್ನು ನೀಡಿತ್ತು—ಎನ್ನುವುದನ್ನು ಬಣ್ಣಿಸುವುದೇ ನನ್ನ ಘನ ಉದ್ದೇಶ.

ಪ್ರಕೃತಿಯ ಚರಾಚರ ವಸ್ತುಗಳೆಲ್ಲ ವಿವಿಧ ರೂಪ, ಬಣ್ಣ, ಆಕಾರ ತಾಳಿ, ಚುನಾವಣಾ ಚಿಂಹ್ನೆಗಳೆಂಬ ಹೆಸರನ್ನು ಹೊತ್ತುಕೊಂಡು ಹಾವಿನ ಹಳ್ಳಿಯ ಹಾದಿ, ಬೀದಿಗಳಲ್ಲೆಲ್ಲ ಸಂಚರಿಸಿದ ದೃಶ್ಯವನ್ನು ಬಣ್ಣಿಸಲು ಶಬ್ದಗಳೇ ಸಾಲವು ! ವೃಕ್ಷ ರಾಜಿಗಳೆಲ್ಲ ಪಕ್ಷಭೇದವನ್ನು ಮರೆತು ಪಕ್ಷಕೇತನಗಳನ್ನು ಮೆರೆಯಿಸುತ್ತ ರಾರಾಜಿಸುತ್ತಿದ್ದ ದೃಶ್ಯವನ್ನು ನೋಡಲು ಕಣ್ಣುಗಳೆರಡೂ ಸಾಲವು ! 'ನಾ ಮುಂದು' 'ತಾ ಮುಂದು' ಎಂದು ಪೈಪೋಟಿ ನಡೆಯಿಸುತ್ತ ಸ್ವರ್ಗಕ್ಕೆ ಲಗ್ಗೆಯಿಡಲು ಧಾವಿಸು

ತ್ತಿರುವ ಚುನಾವಣಾ ರಣ ಕಣದ ವೀರಭಟರ ಪೌರುಷದ ಕೇತನಗಳವು—ಎಂದ ಮೇಲೆ ಚಿಲಿಪಿಲಿಗುಟ್ಟುವ ಪಕ್ಷಿಗಳಿಗೆ ಮರದ ಮೇಲೇನು ಕೆಲಸ ? ಮಂದಮಾರು ತನ ಮೈ ಸೋಂಕಿಗೆ ಪುಲಕಿತಗೊಂಡು ತಟಪಟವೆಂದು ಸದ್ದು ಮಾಡುತ್ತ, ರಣ ಭೇರಿಯ ಒಣ ಸದ್ದನ್ನು ನಾಚಿಸುತ್ತಿದ್ದ ಪಕ್ಷಕೇತನಗಳ ಸ್ವಾಮಿ ನಿಷ್ಠೆ ಸಾಮಾನ್ಯ ದ್ದಲ್ಲ ! ಬೀದಿ ಬದಿಯ ತಂತಿ ಕಂಬಗಳನ್ನೇ ತಂತಿವಾದ್ಯಗಳನ್ನಾಗಿ ಮಾಡಿಕೊಂಡು ವಿವಿಧ ರಾಗ, ತಾನ, ಆಲಾಪಗಳನ್ನು ನುಡಿಸುತ್ತ ರಣಗೀತದ ಸೊಬಗನ್ನು ಹೆಚ್ಚಿ ಸುವ ಕೆಲಸವನ್ನೂ ಮಾಡುತ್ತಿರುವ ಪಕ್ಷಕೇತನಗಳ ಸಾಮರ್ಥ್ಯಕ್ಕೆ ತಲೆದೂಗ ದವರುಂಟೆ ! ಪಟ, ಪಟವೆಂದು ಕೂಗುತ್ತ, ವರ್ಷಧಾರೆಯ ಆಗಮನದ ಹರ್ಷ ವಾರ್ತೆಯನ್ನು ಮಂಡೂಕಗಳು ತಿಳಿಸುತ್ತವೆ—ಎನ್ನುವ ಸಂಗತಿ ಹೊಸತೇನಲ್ಲ. ಹಾವಿನ ಹಳ್ಳಿಯ ಡಾಂಬರು ರಸ್ತೆ, ಕಟ್ಟಡದ ಗೋಡೆ, ಸುತ್ತುಪಾಗಾರಗಳೆಲ್ಲ 'ಓಟು' 'ಓಟು' ಎಂದು ಕಿರುಚುತ್ತ ಚುನಾವಣಾ ಗಾಳಿ ಬೀಸುವ ದಿಕ್ಕನ್ನು ತೋರಿ ಸುತ್ತವೆ—ಎನ್ನುವ ನಿಜಸಂಗತಿ ಬಹುಮಂದಿಗೆ ತಿಳಿದಿರಲಾರದು ! ನಮ್ಮೂರಿನ ಕಲ್ಲು ಸಹ ಅರಳಿ ಹೂವು, ಬಂಡೆಗಳು ಬಿರಿದು ಹಕ್ಕಿ, ಹಣ್ಣು, ಮನುಷ್ಯ, ಸೈಕಲು, ಕಾರು, ಬಸ್ಸು, ವಿಮಾನ—ಇನ್ನೂ ಅನೇಕಾನೇಕ ಜಡ, ಚೇತನ ವಸ್ತುಗಳನ್ನು ಹೆರುತ್ತವೆ—ಎಂದರೆ ನೀವು ನಂಬಲಿಕ್ಕಿಲ್ಲ ! ಬೇಕಾದರೆ, ಹಾವಿನ ಹಳ್ಳಿಯ ಮೂಡಣಕ್ಕಿರುವ ಒಂದು ಸಾವಿರ ಅಡಿ ಎತ್ತರದ ಭೀಮನ ಬೆಟ್ಟವನ್ನೊಮ್ಮೆ ದಿಟ್ಟಿಸಿ ನೋಡಿ. ಚುನಾವಣಾ ಪುಣ್ಯಕಾಲದಲ್ಲಿ ಬೆಟ್ಟದ ತುತ್ತ ತುದಿಯಲ್ಲಿರುವ ಹೆಬ್ಬಂಡೆ ಬಿರಿದು, ಸುಂದರವಾದ ಕಮಲದ ಹೂವು ಅರಳುವುದನ್ನು ಕಣ್ಣಾರೆ ಕಂಡ ಮೇಲಾದರೂ ನನ್ನ ಮಾತನ್ನು ನಂಬಿಯೇ ನಂಬುತ್ತೀರಿ !

ತಮ್ಮ ಪಕ್ಷ ಗೆದ್ದರೆ ನಿರುದ್ಯೋಗದ ಸಮಸ್ಯೆಯನ್ನು ನಿವಾರಿಸಿ ಬಿಡುತ್ತೇವೆ—ಎಂಬುದಾಗಿ ಎಲ್ಲ ಪಕ್ಷಗಳ ಅಭ್ಯರ್ಥಿಗಳೂ ಘಂಟಾಘೋಷವಾಗಿ ಸಾರಿದ್ದನ್ನು ಹಾವಿನ ಹಳ್ಳಿಯಲ್ಲಿ ಕೇಳದವರಿಲ್ಲ. ಹಾಗೆ ಅಂದರೂ, "ಮೊದಲು ಕೆಲಸ; ಆಮೇಲೆ ಮಾತು" ಎನ್ನುವ ತತ್ವಕ್ಕೆ ಅನುಸಾರವಾಗಿ, ಚುನಾವಣಾ ಪುಣ್ಯಕಾಲದಲ್ಲಿ ಪಕ್ಷಭೇದವಿಲ್ಲದೆ, ಹಾವಿನ ಹಳ್ಳಿಯ ಆಬಾಲ, ವೃದ್ಧರಾದಿಯಾಗಿ ಎಲ್ಲರಿಗೂ ಕೈ ತುಂಬ ಕೆಲಸ ಬಾಯಿ ತುಂಬ ಕೆಲಸ. ಕೈ ಕೆಸರಾದರೆ ಬಾಯಿ ಮೊಸರು ಆಗಲೇಬೇಕಲ್ಲವೆ ? ಯುವ ಪ್ರತಿಭೆಯನ್ನು ಗುರುತಿಸಬೇಕಾದರೆ, ಚುನಾವಣೆ ಸಾರಿದಾಗಲೇ ನೀವು ನಮ್ಮೂರಿಗೆ ಬರಬೇಕು. ಎಲೆಮರೆಯ ಕಾಯಿಗಳಂತಿದ್ದ ಕವಿಗಳು, ನಾಟಕ ಕಾರರು, ಸಂಗೀತಗಾರರೆಲ್ಲ, ಗುರುತಿಸುವವರಿಲ್ಲದೆ ಸೊರಗಿದ್ದನ್ನು ಮರೆತು, ಹೊಸ ಹುರುಪಿನಿಂದ ಕವನ, ನಾಟಕಗಳನ್ನು ಸೃಜಿಸಿ, ಭುವನದ ಭಾಗ್ಯವನ್ನು ಹೆಚ್ಚಿಸುವ ಕೆಲಸದಲ್ಲಿ ಮೈಮರೆಯುತ್ತಾರೆ. ಪಿಕಾಸೊ, ರೆಂಬ್ರಾಂಡರಂಥ ಕಲಾ

ವಿದರನ್ನು ನಾಚಿಸಬಲ್ಲ ನಮ್ಮ ಚಿತ್ರ ಕಲಾವಿದರು ಬಣ್ಣ, ಕುಂಚಗಳನ್ನು ಹಿಡಿದುಕೊಂಡು ಬೀದಿಗಳಲ್ಲಿರುವ ರಸ್ತೆ, ಗೋಡೆ, ಬಂಡೆಗಳ ಮೇಲೆ ತಮ್ಮ ಪ್ರತಿಭೆಯ ಮುದ್ರೆಯನ್ನೊತ್ತುತ್ತ ಸುತ್ತುವುದನ್ನು ಕಾಣುವಾಗ ಮೈ ಮರೆಯದವರುಂಟೆ ? ಹಾವಿನ ಹಳ್ಳಿಯ ಪುಟಾಣಿಗಳಿಗಂತೂ ದೇಶ ಭಕ್ತಿ ಅಪಾರ. ಬಸ್ಸು, ಕಾರು, ರಿಕ್ಷಾದಂಥ ವಾಹನಗಳು ದೇಶಭಕ್ತಿ ಗೀತೆಗಳನ್ನು, ಚುನಾವಣಾ ವೀರರ ಅದ್ಭುತ ಪರಾಕ್ರಮವನ್ನು ಬಣ್ಣಿಸುತ್ತ ಸಾಗುವಾಗ, ಈ ಪುಟಾಣಿಗಳೊಳಗೆ ಪೈಪೋಟಿ. ವಾಹನಗಳು ಉದುರಿಸಿದ ಬ್ಯಾಜು, ನೋಟೀಸುಗಳನ್ನು ಪಕ್ಷಭೇದವಿಲ್ಲದೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಂಗ್ರಹಿಸುವುದರಲ್ಲಿ ಪುಟಾಣಿಗಳೊಳಗೆ ಸ್ಪರ್ಧೆ, ಸಂಗ್ರಹಿಸಿದ ಬ್ಯಾಜುಗಳನ್ನೆಲ್ಲ ಪಕ್ಷಭೇದವನ್ನೆಣಿಸದೆ, ಎದೆಯ ತುಂಬ ತೊಟ್ಟುಕೊಂಡು, ಎಲ್ಲ ಪಕ್ಷದ ಅಭ್ಯರ್ಥಿಗಳಿಗೂ ಜಯಕಾರ ಹಾಕುತ್ತ, ಅತ್ತಿತ್ತ ಓಡಾಡುವುದನ್ನು ಕಾಣುವಾಗ ರೋಮಾಂಚನಗೊಳ್ಳದವರುಂಟೆ ? ಪ್ರತಿಯೊಬ್ಬ ಅಭ್ಯರ್ಥಿಗೂ ಇಷ್ಟೊಂದು ಸಂಖ್ಯೆಯಲ್ಲಿ ಅನುಯಾಯಿಗಳಿರುವಾಗ ತಾವೇಕೆ ಹಿಂದುಳಿಯಬೇಕು–ಎನ್ನುವ ಧೋರಣೆಯನ್ನು ತಳೆದಂತಿವೆ—ನಮ್ಮೂರ ನಾಯಿಗಳು, ಅನುಯಾಯಿಗಳೆಂದು ತಮ್ಮನ್ನು ಕರೆಯಲು ಮನುಷ್ಯರು ಒಂದು ವೇಳೆ ಹಿಂದೇಟು ಹಾಕಿದರೂ, ಅನುನಾಯಿಗಳೆಂದಾದರೂ ಖಂಡಿತ ಕರೆದಾರು ಎನ್ನುವ ನಂಬಿಕೆ—ನಮ್ಮೂರ ನಾಯಿಗಳಿಗೆ. ದೇಶ ಸೇವೆಯಂಥ ಪವಿತ್ರ ಯಜ್ಞಕ್ಕೆ ತಮ್ಮ ಪಾಲಿನ ಹವಿಸ್ಸನ್ನು ಸಲ್ಲಿಸಲು ಅವು ಮರೆತಿಲ್ಲ. ಪುಟಾಣಿಗಳಂತೆ ನಾಯಿಗಳಿಗೂ ಪಕ್ಷಭೇದವಿಲ್ಲ. ನಿಷ್ಪಕ್ಷಪಾತವಾಗಿ, ವಿವಿಧ ಪಕ್ಷಗಳ ಬ್ಯಾಜುಗಳನ್ನು ಧರಿಸುತ್ತ ಅವು, ಹಾದಿ ಬೀದಿಗಳಲ್ಲಿ ಸಂಚರಿಸುವ ದೃಶ್ಯವನ್ನು ಕಂಡ ಮೇಲೆಯೂ, ಮನುಷ್ಯ “ತನಗೊಬ್ಬನಿಗೇ ಮಿದುಳು ಇರುವುದು”—ಎಂದು ಬೀಗಬೇಕಾಗಿಲ್ಲ. “ನನ್ನ ಪಕ್ಷದ ನಾಯಿಗೆ ನಿನ್ನ ಪಕ್ಷದ ಬ್ಯಾಜು ಕಟ್ಟಿದರೆ, ನಿನ್ನನ್ನು ಸಿಗಿದು ಹಾಕಿಯೇನು” ಎಂದು ತಮ್ಮ ತಮ್ಮೊಳಗೆ ಕಚ್ಚಾಡಿಕೊಳ್ಳುವ ರಾಜಕಾರಣಿಗಳಿಗಿಂತ, ಈ ನಾಯಿಗಳೇ ಲೇಸಂತೆ. ಹೀಗಂದವರು ಯಾರು ಗೊತ್ತೇ ? ನನ್ನ ಮಗಳು ಎಂಟು ವರ್ಷದ ಸ್ವಪ್ನ ! “ಇದೇನು ಅಸಂಬದ್ಧ ? ಎಂಟು ವರ್ಷದ ಬಾಲೆಗೆ ರಾಜಕೀಯ ಏನು ತಿಳಿಯುತ್ತದೆ ಮಣ್ಣು ?” ಎಂದು ನೀವು ಸಿಟ್ಟಾಗಬೇಕಾಗಿಲ್ಲ. ಆಕೆಯ ಮೂರನೇ ತರಗತಿಯ ಸಮಾಜ ಪಠ್ಯ ಪುಸ್ತಕದಲ್ಲಿ ಗ್ರಾಮಾಡಳಿತ, ತಾಲೂಕು ಆಡಳಿತ, ಜಿಲ್ಲಾಡಳಿತ, ರಾಜ್ಯಾಡಳಿತ, ದೇಶಾಡಳಿತಗಳಿಗೆ ಸಂಬಂಧಪಟ್ಟ ವಿಸ್ತಾರವಾದ ಅಧ್ಯಾಯಗಳಿರು


ಷದಿಂದ ಸ್ತ್ರೀಯರಿಗೆ ರಾಜಕೀಯ ಪ್ರಬುದ್ಧತೆ ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿಯೇ ಕರತಲಾಮಲಕವಾಗಿದೆ. "ಸರಕಾರ-ಚುನಾವಣೆಗೆ ಸ್ಪರ್ಧಿಸಲು ವಯೋಮಿತಿಯನ್ನು ಸಡಿಲಿಸದೆ ತನ್ನಂಥವರಿಗೆ ಅನ್ಯಾಯ ಮಾಡಿದೆ"—ಎನ್ನುತ್ತಾಳೆ, ಆಕೆ. ಆದರೂ ಮುಂದಿನ ಚುನಾವಣೆಯೊಳಗಾಗಿ, ಸರಕಾರಕ್ಕೆ ಬುದ್ಧಿ ಬಂದೀತು—ಎನ್ನುವ ಆಶಾವಾದ ಆಕೆಯದು.

ಅಲಕಾಪುರಿಯ ದೊರೆ ಸಾಕ್ಷಾತ್ ಕುಬೇರನೇ ಚುನಾವಣಾ ಪುಣ್ಯೋದಯದ ಕಾಲದಲ್ಲಿ ಹಾವಿನ ಹಳ್ಳಿಗೆ ಬಂದು, ಬಿಡಾರ ಮಾಡುತ್ತಾನೆಂದರೆ, ನೀವು ನಂಬಲಿಕ್ಕಿಲ್ಲ. ನಮ್ಮ ಹಿರಿಯರು ಹೂತಿಟ್ಟ ಗುಪ್ತಧನವನ್ನೆಲ್ಲ ಅಗೆದು, ಅಗೆದು, ತನ್ನ ದೂತರ ಮೂಲಕ, ಮೊಗೆದು, ಮೊಗೆದು. ಮತದಾರರ ಸೇವೆಗೆ ಪ್ರತಿಫಲದ ರೂಪದಲ್ಲಿ ಮುಟ್ಟಿಸುವುದನ್ನು ಕಾಣುವುದೊಂದು ಅಪೂರ್ವ ದೃಶ್ಯ! ಮತದಾನದ ದಿನವಂತೂ ಒಬ್ಬೊಬ್ಬ ಮತದಾರನೂ ವಿವಿಧ ರೂಪ, ವಿವಿಧ ನಾಮಗಳನ್ನು ಧರಿಸಿಕೊಂಡು ಮಿಂಚಿನಂತೆ ಆಗೊಮ್ಮೆ ಈಗೊಮ್ಮೆ ಮತಗಟ್ಟೆಯನ್ನು ಹೊಕ್ಕು, ಹೊರಡುವುದನ್ನು ಕಾಣುವುದೇ ಕಣ್ಣಿಗೆ ಹಬ್ಬ! ಮತಗಟ್ಟೆಯ ಹೊರಗೆ, ಅದೃಶ್ಯ ರೂಪದಲ್ಲಿ ಗುಡಾರ ಹಾಕಿರುವ ತಂಪು, ಬಿಸಿ ಪಾನೀಯಗಳು ಮತದಾರರ ಬಾಯಿಗೇನೇ ಬಂದು ಬೀಳುತ್ತವಂತೆ! ಇಂಥ ಪಾನ ಮಂದಿರಗಳು ಪುಣ್ಯವಂತರ ಕಣ್ಣಿಗೆ ಮಾತ್ರ ಕಾಣಿಸಿಕೊಳ್ಳುತ್ತವೆಯಂತೆ. ದೇಶ ಸೇವೆಗೆ ಮುನ್ನುಗ್ಗುವ ವೀರಭಟರಂತೆ, ಓಟೆಂಬ ಅಸ್ತ್ರವನ್ನು ಝಳಪಿಸುತ್ತ, ರಣೋತ್ಸಾಹದಿಂದ, ಚುನಾವಣಾ ಕಣಕ್ಕೆ ಮುನ್ನುಗ್ಗುವ ಮತದಾರರಿಗೆ ಭಾರತ ಮಾತೆಯು ಎಷ್ಟು ಕೃತಜ್ಞಳಾದರೂ ಸಾಲದು. ಇಂಥ ಮತದಾರರ ಪೈಕಿ ಬಹು ಮಂದಿ ಬಡವರಾಗಿರುವುದರಿಂದ, ಅವರ ಸ್ವಾಮಿ ನಿಷ್ಠೆ ಪ್ರಶ್ನಾತೀತ. ಮೊನ್ನೆ ತಾನೇ ಗೆದ್ದು, ಗದ್ದುಗೆಯನ್ನೇರಿ ವಿಶಾಲವಾದ ಭರತ ಖಂಡವನ್ನು ಆಳುತ್ತಿರುವ ಭೂಪತಿಗಳಿಗೆ ಮಾತ್ರ ಬಡ ಜನರ ನಿಷ್ಠೆ, ನಿರಕ್ಷರಕುಕ್ಷಿಗಳ ಪಕ್ಷನೋಟದ ಮಹತ್ವ ತಿಳಿದಿರುವುದು. ಹಾಗಾಗಿ, ಭಾರತ ದೇಶ ಶಾಶ್ವತವಾಗಿ ಬಡ ದೇಶವಾಗಿ, ನಿರಕ್ಷರಕುಕ್ಷಿಗಳ ನಾಡಾಗಿಯೇ ಉಳಿಯುವಂತಾಗಲು ಶೀಘ್ರದಲ್ಲಿಯೇ ಶಾಸನವೊಂದನ್ನು ಜಾರಿಗೊಳಿಸುವರಂತೆ.


ಇದಿಷ್ಟು ಪವಿತ್ರ ಚುನಾವಣಾ ಪುರಾಣದ ಸುಂದರ ಕಾಂಡದಲ್ಲಿ ಹೇಳಲ್ಪಟ್ಟಿದೆ. ಈ ಪುರಾಣದಲ್ಲಿ ಹಿಂಸಾ ಕಾಂಡ, ಹತ್ಯಾ ಕಾಂಡ, ವಿಜಯ ಕಾಂಡ, ವೃಕ್ಷ ಕಾಂಡಗಳೆಂಬ ಇನ್ನೂ ಅನೇಕಾನೇಕ ರೋಮಾಂಚಕಾರಿ ಅಧ್ಯಾಯಗಳಿವೆ. ರಾಜಕೀಯ ರಂಗದಲ್ಲಿ "ಲಂಘನಂ ಪರಮೌಷಧಂ" ಎನ್ನುವ ಗಾದೆಯಿದೆಯಷ್ಟೆ. 'ವೃಕ್ಷ ಕಾಂಡ'ವೆಂಬ ಅಧ್ಯಾಯದಲ್ಲಿ ಇದನ್ನು ಸವಿಸ್ತಾರವಾಗಿ ಬಣ್ಣಿಸಲಾಗಿದೆ.

ಹೀಗೆ, ಅನೇಕಾನೇಕ ರೋಮಾಂಚಕಾರಿ ವಿಷಯಗಳನ್ನೊಳಗೊಂಡ, ಸಮಗ್ರ ಚುನಾವಣಾ ಪುರಾಣವು ಓದಲೇಬೇಕಾದ ಗ್ರಂಥ, "ಪವಿತ್ರ ಚುನಾವಣಾ ಪುರಾಣವನ್ನು ಓದಿದವರಿಗೆ ಗಂಗಾ ಸ್ನಾನದ ಫಲ(ಚರ್ಮ ರೋಗ), ತುಂಗಾ ಪಾನದ ಫಲ (ಕರುಳು ಬೇನೆ), ಸಹಸ್ರ ಗೋದಾನದ ಫಲ (ಗೋಮಾಂಸಕ್ಕಾಗಿ), ಭೂ ದಾನದ ಫಲ (ಅಣು ಸ್ಥಾವರ ಕಟ್ಟಿಸಲು), ಇನ್ನೂ ಅನೇಕಾನೇಕ ಫಲಗಳು ತಪ್ಪದೆ ಸಿಗುವುವು— ಎಂಬಲ್ಲಿಗೆ ಮುಗಿದುದು"

ಪವಿತ್ರ ಚುನಾವಣಾ ಪುರಾಣವು ಕೃತ, ತ್ರೇತ, ದ್ವಾಪರಾದಿ ಯುಗಗಳ ಜನರೆಲ್ಲರಿಗೂ ತಿಳಿಯಬೇಕೆಂಬುದು ನಮ್ಮ ಹಂಬಲ. ಅದಕ್ಕಾಗಿ, ಈ ಪುರಾಣವನ್ನು ಕಾಲಕೋಶದೊಳಗೆ ಇರಿಸಿ, ಕಾಲಗರ್ಭದಲ್ಲಿ ಮುಗಿಯಲೇ ಬೇಕು—ಎನ್ನುವ ತೀರ್ಮಾನಕ್ಕೆ ಬರಲಾಗಿದೆ.



"ಸೈಬೀರಿಯಾದಿಂದ ಬಂದಿದಾಳೆ, ನಮ್ಮ ಭಾಷೆ ಬರುಲ್ಲ.
ಅದಕ್ಕೇ ದೂರ ಕೂತಿದಾಳೆ"




REGISTERED No. BGW–180

ಶುಭಾಶಯಗಳೊಂದಿಗೆ

ಟರ್ನ್-ಕೀ ಕನ್‌ಸ್ಟ್ರಕ್ಷನ್ಸ್
(ಪ್ರೈ) ಲಿಮಿಟೆಡ್

11ನೇ ಮೇನ್ ರಸ್ತೆ
ಮಲ್ಲೇಶ್ವರಂ
ಬೆಂಗಳೂರು-560 003

ಫೋನ್ 364118



Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswarm, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Eiditor M. SHIVA KUMAR.